ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ – 582 101
**Raitha Bhavana, General Cariappa Circle, Gadag – 582 101**
*Regional Office: Grameenabhivrudhi Bhavan, Ananda Rao Circle, Bengaluru-560 009*
**E-mail: ksrdpru@gmail.com** **Phone: 08372-230338**

---

ದಿನಾಂಕ 28-08-2020 ಶುಕ್ರವಾರದಂದು ಬೆಳಗ್ಗೆ 11.00 ಘಂಟೆಗೆ, 'Zoom' ಆನಲೈನ್ ಮೀಟಿಂಗ್ App ನಲ್ಲಿ ಜರುಗಿದ ೫ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳು.

**PROCEEDINGS OF THE FIFTH MEETING OF THE EXECUTIVE COUNCIL HELD ON 28-08-2020 AT 11.00 AM THROUGH 'ZOOM' ONLINE MEETING APP.**

**MEMBERS PRESENT:**

| | |
|---|---|
| 1. Prof. Vishnukant S Chatpalli<br>Vice Chancellor | Chairperson |
| 2. Prof. Dr. R.S. Deshpande,<br>Former Director, Institute for Social and Economic Change<br>No. 405, 5th Main, 10th Cross, Teachers' Colony,<br>Nagarabhavi, Bengaluru-72. | Member |
| 3. Prof. T.V. Kattimani<br>Vice Chancellor, Central Tribal University<br>Vijaynagaram, Andhra Pradesh. | Member |
| 4. Dr. S. Rajendra Prasad<br>The Vice Chancellor<br>University of Agricultural Sciences, Bengaluru | Member |
| 5. Dr. Arun R. Patil<br>Adhiti Adhyapakara agara, Hulikoti. | Member |
| 6. Shri Abdul Hakim,<br>Social Worker, Educationist and Writer,<br># 3078, 1st Cross, Gayathrinagar, Bengaluru-21. | Member |
| 7. Prof. Dr. K. M. Hanumantharayappa,<br>Principal & Dean, Faculty of Law (Retd.) and<br>Former Member, Karnataka State Law Commission<br>Presently residing in Guntur, A.P. | Member |
| 8. Dr. Prakash Bhat,<br>Former C.E.O., Society for Community Participation and Empowerment (SCOPE), No.19, Bayalu, Hoysala Nagar, Haliyala Road, Dharwad-580 003. | Member |

9. Shri B.G. Govindappa, Ex-MLA, — Member
Belaguru Village & Post,
Srirampura Hobli, Hosadugra – 577 527.

10. Shri G. B. Shivaraj, — Member
Vice-President, Gandhi Bhavan,
#181, Lakshmi Nivas, 2nd B Main Road, 6th Cross,
9th Block, Nagarbhavi 2nd Stage, Bengaluru-72.

11. Prof.Karisiddappa — Member
Vice Chancellor, VTU, Belagavi.

12. Shri. N Shivshankar — Member
(Representative of the Principal Secretary to Government,
RDPR Department, Govt. of Karnataka, Bengaluru)

13. Dr.Satish Basrigidad (District Health Officer) — Member
(Representative of the Principal Secretary to Government,
Health Department, Govt. of Karnataka, Bengaluru).

14. Shri.C. Puttananjaiah (Deputy Secretary) — Member
(Representative of the Principal Secretary to Government,
Social Welfare Department, Govt. of Karnataka, Bengaluru).

15. Prof B L Lakkannavar — Ex-officio Member-Secretary
Registrar, KSRDPRU

**Leave of Absence:**

1. Smt. N. Jamuna Urs,
Home Scientist (Retd.), J.S.S. KVK, Mysuru,
# 904/7, 3rd Main Road, 1st Cross,
Vidyaranyapuram, Mysuru-570 008.

2. Prof. N. Sivanna
Director I/c. Centre for Research, Innovation and Evaluation,
KSRDPR University, Gadag.

3. The Principal Secretary to Government,
Department of Agriculture, Govt. of Karnataka, Bengaluru.

4. The Principal Secretary to Government,
Labour Department, Govt. of Karnataka, Bengaluru

ಪ್ರಾರಂಭದಲ್ಲಿ ಶ್ರೀ ಪ್ರಶಾಂತ ಜೆ. ಸಿ. ಹಣಕಾಸು ಅಧಿಕಾರಿಗಳು, ಎಲ್ಲ ಸದಸ್ಯರನ್ನು ಕಾರ್ಯನಿರ್ವಾಹಕ ಪರಿಷತ್ತಿನ 5ನೆಯ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು. ಸಭೆಯಲ್ಲಿ ಪ್ರಥಮ ಬಾರಿಗೆ ಪಾಲ್ಗೊಂಡ ಕುಲಪತಿಗಳಾದ ಪ್ರೊ. ವಿಷ್ಣುಕಾಂತ.ಎಸ್.ಚಟಪಲ್ಲಿ ಹಾಗೂ ಕುಲಸಚಿವರಾದ ಪ್ರೊ. ಬಿ.ಎಲ್.ಲಕ್ಕಣ್ಣವರ್, ಇವರನ್ನು ಸಭೆಗೆ ಪರಿಚಯಿಸಲಾಯಿತು.

ಪ್ರಾರಂಭಿಕವಾಗಿ ಕುಲಪತಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ಘನತೆವೆತ್ತ ರಾಜ್ಯಪಾಲರಿಗೆ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ನಂತರ, ಕೋವಿಡ್ ಸಾಂಕ್ರಾಮಿಕ ರೋಗದ ಸಮಯದಲ್ಲಿ, ಆನ್‌ಲೈನ್ ಮುಖಾಂತರ, ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯನ್ನು ಜರುಗಿಸುತ್ತಿದ್ದು, ಸದರಿ ಸಭೆಗೆ ಎಲ್ಲ ಸದಸ್ಯರು, ತಮ್ಮ ಅಮೂಲ್ಯವಾದ ಸಮಯವನ್ನು ನೀಡಿ, ಸಭೆಗೆ ಹಾಜರಾಗಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು. ತದನಂತರ, ಅತೀ ಕಡಿಮೆ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿಯನ್ನು ಹಾಕಿ ಯಶಸ್ವಿಯಾಗಿ ಮುನ್ನಡೆಸಿದ, ಈ ಹಿಂದಿನ ಕುಲಪತಿಗಳ ಹಾಗೂ ಕುಲಸಚಿವರ ಸೇವೆಯನ್ನು ಪ್ರಶಂಸಿಸುತ್ತ ಸ್ಮರಿಸಿದರು. ಅಲ್ಲದೇ, ಈ ಹಿಂದಿನ ಕುಲಪತಿಗಳು ಹಾಗೂ ಕುಲಸಚಿವರಿಗೆ ವಿಶ್ವವಿದ್ಯಾಲಯವನ್ನು ಕಟ್ಟಲು ನೀಡಿದ ಸಹಕಾರ ಸಹಯೋಗವನ್ನು ನೆನೆದು ಧನ್ಯವಾದ ಅರ್ಪಿಸುತ್ತ, ಮುಂದೆಯೂ ಇದೇ ರೀತಿಯ ಮಾರ್ಗದರ್ಶನ ನೀಡುವಂತೆ, ಎಲ್ಲ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಿಗೆ ಕೋರಿದರು.

ಇದರ ಜೊತೆಗೆ, ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ಪ್ರೊ. ಟಿ.ವಿ.ಕಟ್ಟಿಮನಿ, ಇವರು ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವ ಸಮಿತಿಯಲ್ಲಿ ಸದಸ್ಯರಾಗಿ ಉತ್ತಮ ಕಾರ್ಯ ನಿರ್ವಹಿಸಿದಕ್ಕಾಗಿ ಹಾಗೂ ಆಂಧ್ರ ಪ್ರದೇಶದ ವಿಜಯನಗರಂ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕ ಗೊಂಡಿದಕ್ಕಾಗಿ ಅಭಿನಂದನೆಗಳನ್ನು ತಿಳಿಸಿದರು.

ವಿಶ್ವವಿದ್ಯಾಲಯದ, ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ ಕೆ.ಆರ್.ಮಠದ, ಇವರ ಅಕಾಲಿಕ ಮರಣದ ಕುರಿತು ಎಲ್ಲ ಸದಸ್ಯರಿಗೆ ತಿಳಿಸಿ, ವಿಷಾದ ವ್ಯಕ್ತಪಡಿಸಿದರು. ವಿವಿಧ ಕಟ್ಟಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರೆಂದು ತಿಳಿಸುತ್ತ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು, ಮೌನಾಚರಣೆ ಮಾಡಲಾಯಿತು.

ದಿನಾಂಕ: 03-03-2020 ರಂದು ನಡೆದ ಈ ಹಿಂದಿನ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಂತರ ಹಮ್ಮಿಕೊಳ್ಳಲಾದ ವಿವಿಧ ಚಟುವಟಿಕೆಗಳ ಹಾಗೂ ಜರುಗಿಸಲಾದ ಸಭೆಗಳ ಕುರಿತು ಕುಲಪತಿಗಳು ಸಭೆಯಲ್ಲಿ ವಿವರಿಸಿದರು. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಈಡೇರಿಸಲು, ಶೈಕ್ಷಣಿಕ, ಸಂಶೋಧನೆ, ತರಬೇತಿ ಹಾಗೂ ವಿಸ್ತೀರಣಾ ಚಟುವಟಿಕೆಗಳನ್ನು, ARTE (Academic, Research, Training and Extension) ಎಂದು ವಿಂಗಡಿಸಿ ಹಮ್ಮಿಕೊಳ್ಳಲಾಗುತ್ತಿದೆ. ಇದರಡಿ ವಿದ್ಯಾರ್ಥಿಗಳಿಗೆ ಶೇ.95% ರಷ್ಟು ಪಠ್ಯಕ್ರಮವನ್ನು ಆನ್ಲೈನ್ ತರಗತಿಗಳನ್ನು ತೆಗೆದುಕೊಂಡು ಪೂರ್ಣಗೊಳಿಸಲಾಗಿರುತ್ತದೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವೆಬಿನಾರಗಳನ್ನು ಜರುಗಿಸಿ ಇ-ಪ್ರಮಾಣ ಪತ್ರಗಳನ್ನು ವಿತರಿಸಲಾಗಿರುತ್ತದೆ. ಪಂಚಾಯತ ರಾಜ್ ಸಂಸ್ಥೆಯ ವಿವಿಧ ಸ್ತರದ ಪ್ರತಿನಿಧಿಗಳು ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲು ಅಬ್ದುಲ್ ನಜೀರ್ ಸಾಬ್ ಎಸ.ಐ.ಆರ್.ಡಿ. ಸಂಸ್ಥೆ, ಮೈಸೂರು ಹಾಗೂ ಇತರೆ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಈಗಾಗಲೇ ಸಮಾಲೋಚನೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಎಂದರು. ಇದರ ಜೊತೆಗೆ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ (ನರ್ಸರಿ), ಪ್ರಾಯೋಗಿಕ ಕೃಷಿ ಚಟುವಟಿಕೆಗಳು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುವುದಾಗಿ ತಿಳಿಸಿದರು. ದಿನಾಂಕ:30-07-2020 ರಂದು ಮಾನ್ಯ ಗ್ರಾಮೀಣಾಭವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಸಚಿವರಾದ, ಶ್ರೀ ಕೆ.ಎಸ್.ಈಶ್ವರಪ್ಪ ನವರು, ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು. ಅವರು ನೂತನ ಕ್ಯಾಂಪಸ ನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಟ್ಟಡ ಕಾಮಗಾರಿಗಳ ವೀಕ್ಷಣೆ ಮಾಡಿ, ವಿಶ್ವವಿದ್ಯಾಲಯದ ಸಿಬ್ಬಂದಿಗಳ ಜೊತೆ ಸಮಾಲೋಚನಾ ಸಭಾ ಜರುಗಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಕುರಿತು ಸಂತಸ ವ್ಯಕ್ತಪಡಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಮಾನ್ಯ ಸಚಿವರ ಜೊತೆಗೆ, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಎಲ್.ಕೆ.ಅತೀಕ್, ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತರಾದ ಶ್ರೀಮತಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಇವರು ಸಹ ಉಪಸ್ಥಿತರಿದ್ದು ಸಭೆಯಲ್ಲಿ ಭಾಗವಹಿಸಿರುವುದಾಗಿ ತಿಳಿಸಿದರು.

ಮುಂದಿನ ದಿನಮಾನಗಳಲ್ಲಿ ವಿಶ್ವವಿದ್ಯಾಲಯವನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸಲು, ಕುಲಪತಿಗಳು ಎಲ್ಲ ಸದಸ್ಯರ ಸಹಕಾರ ಮತ್ತು ಸಹಯೋಗವನ್ನು ಕೋರಿದರು. ಸದರಿ ಚಟುವಟಿಕೆಗಳ ಕುರಿತು, ಸದಸ್ಯರ ಅಭಿಪ್ರಾಯ ಕೋರಿದರು.

- ಶ್ರೀ ಆರ್.ಎಸ್.ದೇಶಪಾಂಡೆ ಇವರು ಮಾತನಾಡುತ್ತ, ಅತೀ ಕಡಿಮೆ ಸಮಯದಲ್ಲಿ ಒಳ್ಳೆಯ ಕಾರ್ಯಗಳು ಜರುಗಿಸಲಾಗುತ್ತಿದೆ. ಖಕಿಂಅ, ಸ್ಥಾಪಿಸಿದಕ್ಕೆ, ಹಾಗೂ ನ್ಯಾಕ ಮಾನ್ಯತೆ ಪಡೆಯಲು ಈಗಿನಿಂದಲೇ ಕಾರ್ಯಪ್ರವೃತ್ತರಾಗಿರುವುದು ಸಂತಸದ ವಿಷಯವೆಂದು ತಿಳಿಸಿದರು.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ರಾಜೇಂದ್ರ ಪ್ರಸಾದ ಇವರು ಮಾತನಾಡುತ್ತ, ಈ ಹಿಂದಿನ ಸಭೆಯಲ್ಲಿ ತಿಳಿಸಿದಂತೆ, ಅವರ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಕ್ರಮ ಜರುಗಿಸಬೇಕಾಗಿ ಕೋರಿದರು.
- ಶ್ರೀ ಅಬ್ದುಲ್ ಹಕೀಂ, ಇವರು, ಕುಲಪತಿಗಳಿಗೆ ಹಾಗೂ ಕುಲಸಚಿವರಿಗೆ ಆತ್ಮೀಯವಾಗಿ ಸ್ವಾಗತಿಸಿ, ವಿಶ್ವವಿದ್ಯಾಲಯದ ಎಲ್ಲಾ ಜಮೀನುಗಳ ಗಡಿ ಗುರುತಿಸುವುದು ಹಾಗೂ ಜಮೀನಿನ ಸಂರಕ್ಷಣೆಗೆ ತಂತಿ ಬೇಲಿ/ ರಕ್ಷಣಾ ಗೋಡೆ ನಿರ್ಮಿಸಲು ಸೂಕ್ತ ಕ್ರಮ ಜರುಗಿಸಲು ತಿಳಿಸಿದರು. ಜೊತೆಗೆ, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸಿ, ಅನುದಾನ ಬಿಡುಗಡೆಗೊಳಿಸಲು ಕ್ರಮ ತೆಗೆದುಕೊಳ್ಳವಂತೆ ಸಲಹೆ ನೀಡಿ, ಈಗಾಗಲೇ, ಹಲವು ವಿಶ್ವವಿದ್ಯಾಲಯಗಳಲ್ಲಿ, ರಾಜ್ಯ/ಕೇಂದ್ರ ಮಟ್ಟದಲ್ಲಿ ಅಧಿವೇಶನಗಳು ನಡೆಸಲಾಗುತ್ತಿರುವುದರಿಂದ, ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯನ್ನು ಮೌಖಿಕವಾಗಿ ಮಾಡಿದ್ದಲ್ಲಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಬಹುದಾಗಿದೆ ಎಂಬ ವಿಷಯವನ್ನು ಪ್ರಸ್ತಾಪಿಸಿದರು.
- ಶ್ರೀ ಜಿ.ಬಿ.ಶಿವರಾಜು ಇವರು ಮಾತನಾಡುತ್ತ, ಇದು ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲದೇ, ಒಂದು ವಿಶಿಷ್ಟ ವಿಶ್ವವಿದ್ಯಾಲಯವಾಗಿರುತ್ತದೆ. ಹಿಂದಿನ ಕುಲಪತಿಗಳು ಹಾಗೂ ಕುಲಸಚಿವರು ಭದ್ರ ಬುನಾದಿ ಹಾಕಿರುತ್ತಾರೆ. ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ವಿಶೇಷ ನಿಪುಣತೆ ಹೊಂದುವತ್ತ ಕ್ರಮ ಕೈಗೊಳ್ಳಬೇಕಾಗಿ ತಿಳಿಸಿದರು. ಅಲ್ಲದೇ, ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಅಭಿವೃದ್ಧಿ ಪಡಿಸಲು ವಿಶೇಷ ಕಾಳಜಿ ವಹಿಸಬೇಕಾಗಿ ತಿಳಿಸಿದರು.
- ಶ್ರೀ, ಅರುಣ್ ಪಾಟೀಲ್, ಇವರು ಮಾತನಾಡುತ್ತ, ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳಿಗೆ ತಕ್ಕಂತೆ, ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ಸಂತಸದ ವಿಷಯ. ವಿಶ್ವವಿದ್ಯಾಲಯದ ಕುರಿತು ಇನ್ನೂ ಹೆಚ್ಚು ವ್ಯಾಪಕವಾಗಿ ಪ್ರಚಾರ ಮಾಡುವುದು ಅವಶ್ಯವಿರುವುದರಿಂದ, ಇದರ ಕುರಿತು ಸೂಕ್ತ ಕ್ರಮ ಜರುಗಿಸಲು ತಿಳಿಸಿದರು.
- ಶ್ರೀ ಬಿ.ಜಿ.ಗೋವಿಂದಪ್ಪ ಇವರು ಮಾತನಾಡುತ್ತ, ವಿಶ್ವವಿದ್ಯಾಲಯದಲ್ಲಿ ಮುಂದೆ ಶೈಕ್ಷಣಿಕ ಸಾಲಿನಲ್ಲಿ ತೆಗೆದುಕೊಳ್ಳಬಹುದಾದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರು.
- ಆಂಧ್ರ ಪ್ರದೇಶದ, ವಿಜಯನಗರಂನ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾದ, ಪ್ರೊ.ಟಿ.ವಿ.ಕಟ್ಟಿಮನಿ ಅವರು ಮಾತನಾಡುತ್ತ, ನೂತನವಾಗಿ ತರಲಾದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಅಂಶಗಳನ್ನು ಆದಷ್ಟೂ, ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ/ ಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳಬೇಕು, ಇದರಿಂದ ವಿದ್ಯಾರ್ಥಿಗಳ ಹಾಗೂ ವಿಶ್ವದ್ಯಾಲಯದ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿ ಮಾಡುವಲ್ಲಿ ಸಹಕಾರಿಯಾಗಲಿದೆ ಎಂದು ತಿಳಿಸುತ್ತ, ನೂತನ ಕುಲಪತಿಗಳಿಗೆ ಹಾಗೂ ಕುಲಸಚಿವರಿಗೆ ಶುಭ ಕೋರಿದರು.

ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

ವಿಷಯ ಸಂಖ್ಯೆ ೧: ದಿನಾಂಕ 03-03-2020 ರಂದು ಜರುಗಿದ 4ನೇ ಕಾರ್ಯನಿರ್ವಾಹಕ ಪರಿಷತ್ತಿನ ಮತ್ತು 15-04-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ(By Circulation of papers) ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ಪರಾಮರ್ಶನ ಟಿಪ್ಪಣಿ**

ದಿನಾಂಕ 03-03-2020 ರಂದು ಜರುಗಿದ 4ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮತ್ತು 15-04-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ(By Circulation of papers) ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ. (ನಡಾವಳಿಗಳನ್ನು ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ)

**Subject No.1: Confirmation of the Proceedings of the Fourth meeting and By Circulation of Papers of the Executive Council held on 03-03-2020 and 15-04-2020 respectively.**

**Reference Note:**

The Proceedings of the fourth meeting of the Executive Council held on 03-03-2020 and meeting of the Executive Council (By Circulation of papers) held on 15-04-2020 were circulated to all the members. Since no objections or corrections have been received from any member, they are deemed to have been confirmed. (Related copies placed at Annexure 1).

**ನಿರ್ಣಯ**

ದಿನಾಂಕ: 03/03/2020 ರಂದು ಜರುಗಿದ ೪ನೇ ಸಭೆ ಹಾಗೂ ದಿನಾಂಕ: 15/04/2020 ರಂದು ಜರುಗಿದ (By Circulation of papers) ಕಾರ್ಯನಿರ್ವಾಹಕ ಪರಿಷತ್ ಸಭೆಗಳ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ಸ್ಥಿರೀಕರಿಸಲಾಯಿತು.

**RESOLUTION:**

The Executive Council confirmed the proceedings of the Fourth Meeting of the Executive Council held on 03/03/2020 and meeting of the Executive Council (By Circulation of papers) held on 15-04-2020.

**ವಿಷಯ ಸಂಖ್ಯೆ ೨: ದಿನಾಂಕ ೦೩-೦೩-೨೦೨೦ ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ನಾಲ್ಕನೇ ಸಭೆಯಲ್ಲಿ ಹಾಗೂ ೧೫-೦೪-೨೦೨೦ರಂದು By Circulation of papers ಮೂಲಕ ಮಾಡಿದ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ ೦೩-೦೩-೨೦೨೦ ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ನಾಲ್ಕನೇ ಸಭೆಯಲ್ಲಿ ಹಾಗೂ ೧೫-೦೪-೨೦೨೦ರಂದು By Circulation of papers ಮೂಲಕ ಮಾಡಿದ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ. (ಅನುಬಂಧ ೧,೨,೩,೪,೫,೬,೭ ಮತ್ತು ೮ ರಲ್ಲಿ ಲಗತ್ತಿಸಲಾಗಿದೆ)

**Subject No. 2: Action Taken Report (ATR) on the resolutions of the fourth meeting of the Executive Council held on 03/03/2020 and 15-04-2020 (By circulation)**

**Reference Note:**

Action Taken Report (ATR) on the resolutions of the fourth meeting of the Executive Council held on 03/03/2020 and the meeting held on 15-04-2020 By Circulation of Paper, is placed before the Executive Council for kind information. (Related copies placed at Annexures 1,2,3,4,5,6,7 and 8).

**ನಿರ್ಣಯ**

ಸದಸ್ಯ ಕಾರ್ಯದರ್ಶಿಗಳು, ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳ ಪ್ರತಿಯೊಂದು ನಿರ್ಣಯದ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನು ಸಭೆಗೆ ವಿವರಿಸಿದರು.

ದಿನಾಂಕ 03/03/2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ 4ನೇ ಸಭೆಯ ವಿಷಯ ಸಂಖ್ಯೆ 3 ರಲ್ಲಿ, ಕಟ್ಟಡ ಕಾಮಗಾರಿಗಳ ಕುರಿತಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪರವಾಗಿ ಉಪಸ್ಥಿತರಿದ್ದ, ಶ್ರೀ ಶಿವಶಂಕರ್, ನಿರ್ದೇಶಕರು (ಪಂ.ರಾಜ್), ಇವರು ಮಾತನಾಡುತ್ತ, ಸರ್ಕಾರದ ವತಿಯಿಂದ ಕಳೆದ ಸಾಲುಗಳಲ್ಲಿ ಮಂಜೂರಾಗಿರುವ 35 ಕೋಟಿ ರೂಪಾಯಿಗಳ ಅನುದಾನದಲ್ಲಿ, ಶೇ.75, ಖರ್ಚು ಮಾಡಿದಾಗ, 2020–21 ನೇ ಸಾಲಿಗೆ ಬಂಡವಾಳ ವೆಚ್ಚಕ್ಕಾಗಿ ನಿಗದಿಯಾದ ಅನುದಾನ ಬಿಡುಗಡೆಗೊಳಿಸಲಾಗುವುದು ಎಂದು ತಿಳಿಸಿದರು. ಅದಕ್ಕೆ, ಹಣಕಾಸು ಅಧಿಕಾರಿಗಳು, ಕೋವಿಡ್ ಸಾಂಕ್ರಾಮಿಕ ರೋಗದಿಂದ ಉಂಟಾಗಿರುವ ಲಾಕಡೌನ್ ಪರಿಸ್ಥಿತಿಯಿಂದ, ಕಾಮಗಾರಿ ಕುಂಠಿತಗೊಂಡಿದ್ದು, ವರ್ಷಾಂತ್ಯಕ್ಕೆ ಕಾಮಗಾರಿಗಳನ್ನು ಪರ್ಣಗೊಳಿಸಿ, ಲಭ್ಯವಿರುವ ಅನುದಾನ ಬಳಕೆ ಮಾಡಲಾಗುವುದೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ, ಪ್ರತಿ ವಾರ ಗುತ್ತಿಗೆದಾರರ ಹಾಗೂ ಆರ್ಕಿಟೆಕ್ಟಗಳ ಸಭೆಗಳ ಏರ್ಪಡಿಸಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು. ಶ್ರೀ ಬಿ.ಜಿ.ಗೋವಿಂದಪ್ಪ ಇವರು, ಅನುದಾನ ಬಳಕೆ ಮಾಡಲು ತ್ವರಿತವಾಗಿ ಕಾಮಗಾರಿಗಳನ್ನು

ಪೂರ್ಣಗೊಳಿಸಲು ತಿಳಿಸದರು. ಕುಲಪತಿಗಳು, ವಿಶ್ವವಿದ್ಯಾಲಯದ ನೂತನ ಕ್ಯಾಂಪಸ ನಲ್ಲಿ ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳ ಪ್ರಗತಿಯನ್ನು ಸಭೆಯ ಮುಂದೆ ವಿವರಿಸಿದರು. ಜನೇವರಿ 2020 ಮಾಹೆಯಲ್ಲಿ, ತರಬೇತಿ ಕೇಂದ್ರ ಕಟ್ಟಡ ಪೂರ್ಣಗೊಳಿಸಿ, ಗ್ರಾಮ ಪಂಚಾಯತಿಯ ಚುನಾಯಿತ ಜನ ಪ್ರತಿನಿಧಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮ ಜರುಗಿಸಲಾಗುವುದೆಂದು ಹೇಳಿದರು. ಶ್ರೀ ಜಿ.ಬಿ.ಶಿವರಾಜು ಇವರು ಮಾತನಾಡಿ, ಸಾಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡ, ಕಾಮಗಾರಿಗಳ ಹೃದಯ ಭಾಗವಾಗಿದ್ದು, ವಿಶೇಷ ಒತ್ತು ನೀಡಿ ಅತೀ ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಮೇಲ್ಕಂಡ ಚರ್ಚೆಯೊಂದಿಗೆ, ದಿನಾಂಕ:03–03–2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ 4ನೇ ಸಭೆಯ ಹಾಗೂ ದಿನಾಂಕ 15–04–2020 ರ (ಪ್ರಸರಣದ ಮೂಲಕ) ತೆಗೆದುಕೊಂಡ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿ, ಅನುಮೋದಿಸಿತು.

**ವಿಷಯ ಸಂಖ್ಯೆ ೩: ದಿನಾಂಕ ೧೪–೦೭–೨೦೨೦ ರಂದು online virtual meeting mode ನಲ್ಲಿ ಜರುಗಿದ ೪ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ ೧೪–೦೭–೨೦೨೦ ರಂದು ಅಪರಾಹ್ನ ೧೨.೦೦ ಗಂಟೆಗೆ **online virtual meeting mode** ನಲ್ಲಿ ಜರುಗಿದ ೪ನೇ ಹಣಕಾಸು ಸಮಿತಿಯ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡಾವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ. (ಅನುಬಂಧ ೧,೨,೩ ಮತ್ತು ೪ ರಲ್ಲಿ ಲಗತ್ತಿಸಲಾಗಿದೆ)

**Subject No. 3: To consider and approve the Proceedings of the Finance Committee Meeting held on 14-07-2020 through online virtual meeting mode.**

**Reference Note:**

The Proceedings of the 4th meeting of the Finance Committee held on 14-07-2020 at 12.00 Noon through online virtual meeting mode is placed before the Executive Council for kind consideration and approval. Copy of the Proceedings is attached herewith. (Related copies placed at Annexures 1,2,3 and 4)

### ನಿರ್ಣಯ

ಹಣಕಾಸು ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. ನಂತರ ದಿನಾಂಕ 14/07/2020 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೪: ದಿನಾಂಕ ೦೫-೦೬-೨೦೨೦ ರಂದು ಜರುಗಿದ ೮ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ ೦೫-೦೬-೨೦೨೦ ರಂದು ಜರುಗಿದ ೮ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡಾವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ. (ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ)

**Subject No. 4: To consider and approve the Proceedings of the 8th Works Committee Meetings held on 05-06-2020.**

**Reference Note:**

The Proceedings of the 8th meeting of the Works Committee held on 05-06-2020 are placed before the Executive Council for kind consideration and approval. Copies of the Proceedings are attached herewith. (Related copies placed at Annexure 1).

### ನಿರ್ಣಯ

ಕಾಮಗಾರಿ ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಅಧ್ಯಕ್ಷರು ಸಭೆಗೆ ವಿವರಿಸಿದರು. ನಂತರ ದಿನಾಂಕ 05/06/2020 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೫: ದಿನಾಂಕ ೧೮-೦೬-೨೦೨೦ ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ ೧೮-೦೬-೨೦೨೦ ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡಾವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ. (ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ).

**Subject No. 5: To consider and approve the Proceedings of the Library Advisory Committee Meeting held on 18-06-2020.**

**Reference Note:**

The Proceedings of the meeting of the Library Advisory Committee held on 18-06-2020 is placed before the Executive Council for kind consideration and approval. Copy of the Proceedings is attached herewith. (Related copies placed at Annexure 1)

ನಿರ್ಣಯ

ಗ್ರಂಥಾಲಯ ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

ಶ್ರೀ ಜಿ.ಬಿ.ಶಿವರಾಜು ಇವರು ಮಾತನಾಡಿ, ಗಾಂಧೀಜಿ ಹಾಗೂ ಗ್ರಾಮೀಣಾಭಿವೃದ್ಧಿ ಕುರಿತಾಗಿ ಸಿ.ಡಿ, ಸಾಕ್ಷ್ಯಚಿತ್ರಗಳು (Documentary) ಇತ್ಯಾದಿಗಳು ಲಭ್ಯವಿರುವಂತೆ ಕ್ರಮ ಕೈಗೊಳ್ಳಲು ತಿಳಿಸಿದರು. ಇದಕ್ಕೆ ಹಣಕಾಸು ಅಧಿಕಾರಿಗಳು, ಗಾಂಧೀಜಿಯವರ, ಅಂಬೇಡ್ಕರ್ ರವರ ಜೀವನದ ಕುರಿತಾಗಿ ಸಾಕಷ್ಟು ಪುಸ್ತಕಗಳನ್ನು ಈಗಾಗಲೇ ಖರೀದಿಸಲಾಗಿರುವುದಾಗಿ ತಿಳಿಸದರು. ಗಾಂಧೀಜಿಯವರ ಅಧ್ಯಯನಕ್ಕಾಗಿ ಗಾಂಧೀ ಪೀಠ ಸ್ಥಾಪಿಸುವ ಕುರಿತು ಮುಂದಿನ ದಿನಗಳಲ್ಲಿ ಕ್ರಮವಿಡಬಹುದಾಗಿದೆ ಎಂದು ತಿಳಿಸದರು, ಕುಲಪತಿಗಳು, ಮಾತನಾಡುತ್ತ, ಸಾಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡದಲ್ಲಿ ಗಾಂಧೀಜಿಯವರ ಜೀವನಾಧಾರಿತ ಪುಸ್ತಕ/ ಸಂಗ್ರಹಣೆಗಳಿಗಾಗಿ ಪ್ರತ್ಯೇಕ ವಿಭಾಗವನ್ನು ರಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಿದರು.

ಮೇಲ್ಕಂಡ ಚರ್ಚೆಯೊಂದಿಗೆ, ದಿನಾಂಕ 18/06/2020 ರಂದು ಜರುಗಿದ ಗ್ರಂಥಾಲಯ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೬: ದಿನಾಂಕ ೦೪-೦೮-೨೦೨೦ ರಂದು ಜರುಗಿದ ಸ್ಥಾಯಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ ೦೪-೦೮-೨೦೨೦ ರಂದು ಜರುಗಿದ ಸ್ಥಾಯಿ ಸಮಿತಿ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮುಂದೆ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

## Subject 6: To consider and approve the Proceedings of the Standing Committee Meeting held on 04-08-2020

**Reference Note:**

The Proceedings of the Standing Committee meeting held on 04-08-2020 will be placed before the Executive Council meeting for kind consideration and approval.

**ನಿರ್ಣಯ**

ಸ್ಥಾಯಿ ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ತರಬೇತಿ ಆಯೋಜಿಸುವ ಕುರಿತಂತೆ ಹಿಂದಿನ ಕುಲಪತಿಗಳಾದ ಪ್ರೊ. ತಿಮ್ಮೇಗೌಡ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ತರಬೇತಿ ಕಾರ್ಯಕ್ರಮಗಳ ಕ್ಯಾಲಂಡರ್ ಅನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. ಮುಂದುವರೆದು, ಕುಲಪತಿಗಳು, ದಕ್ಷಿಣ ಕರ್ನಾಟಕ ಭಾಗದಲ್ಲಿನ ಪ್ರತಿನಿಧಿಗಳಿಗೆ ಮೈಸೂರಿನ ಎಸ್.ಐ.ಆರ್.ಡಿ ಯಲ್ಲಿ ಹಾಗೂ ಉತ್ತರ ಕರ್ನಾಟಕದ ಭಾಗದಲ್ಲಿನ ಪ್ರತಿನಿಧಿಗಳಿಗೆ ಗದಗ ದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಶಿವಶಂಕರ್, ನಿರ್ದೇಶಕರು (ಪಂ.ರಾಜ್), ಇವರು ಮಾತನಾಡುತ್ತ, ಗ್ರಾಮ ಪಂಚಾಯತಿಗಳ ಅಂದಾಜು ಒಂದು ಲಕ್ಷ ಚುನಾಯಿತ ಪ್ರತಿನಿಧಿಗಳಿಗೆ, ತರಬೇತಿ ನೀಡಬೇಕಾಗಿರುವುದರಿಂದ, ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಸದರಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತಿದ್ದು, ಇದಕ್ಕಾಗಿ, ೧೭೬ ತಾಲ್ಲೂಕು ಪಂಚಾಯತಿಗಳಲ್ಲಿ ಲಭ್ಯವಿರುವ ಸಾಮರ್ಥ್ಯ ಸೌಧ, ಹಾಗೂ ಇತರೆ ಸೌಕರ್ಯಗಳನ್ನು ಬಳಸಿಕೊಂಡು, ಐದು ತಿಂಗಳಿನೊಳಗೆ ತರಬೇತಿ ನೀಡಲಾಗಿತ್ತಿದ್ದು, ಇದನ್ನು, ಅವರು ಚುನಾಯಿತರಾದ ಮೂರು ತಿಂಗಳಿನೊಳಗಡೆ, ಪೂರ್ಣಗೊಳಿಸಲು ಕ್ರಮ ಜರುಗಿಸಬೇಕಾಗಿ ತಿಳಿಸಿದರು. ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಜೊತೆ ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ, ಕುಲಪತಿಗಳ ಅಧ್ಯಕ್ಷತೆಯಲ್ಲಿ, ಕೋರ್ ಸಮಿತಿಯನ್ನು ರಚಿಸಿ, ಸೂಕ್ತ ಪಠ್ಯಕ್ರಮ ಜರುಗಿಸಬೇಕಾಗಿ ಕೋರಿದರು. ಕುಲಪತಿಗಳು, ಇದಕ್ಕೆ ಸಹಮತಿಸಿ, ಏಕಕಾಲದಲ್ಲಿ ತರಬೇತಿ ನೀಡುವ ಕುರಿತು ಕ್ರಮ ಜರುಗಿಸಲು SIRD, Mysuru, ಇವರೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಶ್ರೀ ಬಿ.ಜಿ.ಗೋವಿಂದಪ್ಪ ಇವರು ಮಾತನಾಡಿ, ತರಬೇತಿದಾರರ ತರಬೇತಿ ಹಾಗೂ ಸಂಪನ್ಮೂಲ ವ್ಯಕ್ತಿಗಳ ತರಬೇತಿ ನೀಡುವ ಕುರಿತು ಕ್ರಮ ಜರುಗಿಸಲು ತಿಳಿಸಿದರು. ಶ್ರೀ ಶಿವಶಂಕರ್, ನಿರ್ದೇಶಕರು (ಪಂ.ರಾಜ್), ಇವರು ಮಾತನಾಡಿ, ಈಗಾಗಲೇ, SIRD, Mysuru, ಇವರಲ್ಲಿ ಅಂದಾಜು ೧೯೦ ಸಂಖ್ಯೆಯ, NIRD ಇವರಿಂದ ಪ್ರಮಾಣಿತ ಸಂಪನ್ಮೂಲ ವ್ಯಕ್ತಿಗಳಿದ್ದು, ಅವರ ನೆರವು ಪಡೆದು, ಇನ್ನೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳ ಅವಶ್ಯಕತೆಯಿದ್ದಲ್ಲಿ, ಸೂಕ್ತ ವ್ಯಕ್ತಿಗಳ ಸೇವೆ ಪಡೆಯಬಹುದಾಗಿದೆ ಎಂದರು.

ಮೇಲ್ಕಂಡ ಚರ್ಚೆಯೊಂದಿಗೆ, ದಿನಾಂಕ 04/08/2020 ರಂದು ಜರುಗಿದ ಸ್ಥಾಯಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೭: ದಿನಾಂಕ ೦೬-೦೮-೨೦೨೦ ಮತ್ತು ೨೦-೦೮-೨೦೨೦ ರಂದು ಜರುಗಿದ ರಿನ್ಯುವೆಬಲ್ ಎನರ್ಜಿ ಸ್ನಾತಕೋತ್ತರ ಡಿಪ್ಲೊಮ ಪದವಿಯ ಪಠ್ಯ ವಿಷಯಗಳನ್ನು ವಿನ್ಯಾಸಗೊಳಿಸಲು ನಡೆದ ತಜ್ಞರ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ ೦೬-೦೮-೨೦೨೦ ಮತ್ತು ೨೦-೦೮-೨೦೨೦ ರಂದು ಜರುಗಿದ ನವೀಕರಿಬಹುದಾದ ಇಂಧನ (ರಿನ್ಯುವೆಬಲ್ ಎನರ್ಜಿ) ಸ್ನಾತಕೋತ್ತರ ಡಿಪ್ಲೊಮ ಪದವಿಯ ಪಠ್ಯ ವಿಷಯಗಳನ್ನು ವಿನ್ಯಾಸಗೊಳಿಸಲು ನಡೆದ ತಜ್ಞರ ಸಮಿತಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ. ನಡಾವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ. (ಅನುಬಂಧ ೧ ಮತ್ತು ೨ ರಲ್ಲಿ ಲಗತ್ತಿಸಲಾಗಿದೆ)

**Subject 7: To consider the Proceedings of the Meetings of the Expert Committee to Design and Draft the course Contents of Post Graduate Diploma Programme in Renewable energy held on 06-08-2020 and 20-08-2020.**

**Reference Note:**

The Proceedings of the meetings of the Expert Committee to Design and Draft the Course contents of Post Graduate Diploma Programme in Renewable Energy held on 06-08-2020 and 20-08-2020 are placed before the Executive Council for kind consideration. Copy of the Proceedings is attached herewith. (Related copies placed at Annexures 1and 2)

**ನಿರ್ಣಯ**

ತಜ್ಞರ ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಅಧ್ಯಕ್ಷರು ಸಭೆಗೆ ವಿವರಿಸಿದರು.

ವಿ.ಟಿ.ಯು ನ ಕುಲಪತಿಗಳಾದ ಪ್ರೊ.ಕರಿಸಿದ್ದಪ್ಪ ಇವರು, ಮಾತನಾಡುತ್ತ, ಈ ಕಾರ್ಯಕ್ರಮವು, ಸದ್ಯದ ಪರಿಸ್ಥಿತಿಗೆ ತುಂಬಾ ಅನುಕೂಲಕರವಾಗಿಯೂ, ಪ್ರಸ್ತುತವೂ ಆಗಿರುವುದರಿಂದ, ಇದನ್ನು ಪ್ರಾರಂಭ ಮಾಡಬಹುದು ಎಂದು ಸಹಮತಿ ವ್ಯಕ್ತಪಡಿಸಿದರು. ಸದರಿ ಕಾರ್ಯಕ್ರಮವನ್ನು, ಬೆಂಗಳೂರಿನ ಎಮ್.ಜಿ.ಐ.ಆರ್.ಇ.ಡಿ, ಸಂಸ್ಥೆಯಲ್ಲಿ ಲಭ್ಯವಿರುವ ಪ್ರಯೋಗಾಲಯಗಳನ್ನು ಉಪಯೋಗಿಸಿಕೊಂಡು, ಬೆಂಗಳೂರಿನಲ್ಲಿಯೇ ಪ್ರಾರಂಭಿಸಲಾಗುವುದೆಂದು ಸಭೆಗೆ ವಿವರಿಸಿದರು. ಈಗಾಗಲೇ, ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದ್ದು ಹಾಗೂ ಈ ಸಂಸ್ಥೆಯೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆಯ ಅಡಿಯಲ್ಲಿನ ಸಂಸ್ಥೆಯಾಗಿರುವುದರಿಂದ ಈ ಕಾರ್ಯಕ್ರಮ ಪ್ರಾರಂಭಿಸಲು ಅನುಕೂಲವಾಗುವುದು ಎಂದು ಕುಲಪತಿಗಳು ತಿಳಿಸಿದರು.

ನಂತರ ದಿನಾಂಕ 05/06/2020 ರಂದು ಜರುಗಿದ ತಜ್ಞರ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೮: ಪ್ರತಿ ತಿಂಗಳ ೨ ಮತ್ತು ೪ನೆಯ ಶನಿವಾರಗಳನ್ನು ವಿಶ್ವವಿದ್ಯಾಲಯದ ಕಛೇರಿಗಳಿಗೆ ಸಾರ್ವತ್ರಿಕ ರಜೆ ಎಂದು ಘೋಷಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:-**

ದಿನಾಂಕ ೦೭-೦೮-೨೦೧೯ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಿದೆ:

- ➢ ದಿನಾಂಕ ೧೩-೦೬-೨೦೧೯ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ ೦೨ ಹೆಚ್‌ಹೆಚ್‌ಎಲ್ ೨೦೧೯ ರನ್ವಯ ಪ್ರತಿ ಎರಡನೇ ಶನಿವಾರದ ಸಾರ್ವತ್ರಿಕ ರಜಾ ದಿನಗಳ ಜೊತೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ ಕಛೇರಿಗಳಿಗೆ ಪ್ರತಿ ತಿಂಗಳ ನಾಲ್ಕನೇ ಶನಿವಾರವನ್ನು ಸಹ ಸಾರ್ವತ್ರಿಕ ರಜೆ ಎಂದು ಘೋಷಿಸಲಾಗಿರುತ್ತದೆ ಹಾಗೂ ಕೆ.ಸಿ.ಎಸ್.ಆರ್ ಅಡಿಯಲ್ಲಿನ ೧೫ ದಿನಗಳ ಸಾಂದರ್ಭಿಕ ರಜೆ ದಿನಗಳನ್ನು ಹತ್ತು ದಿನಗಳಿಗೆ ಇಳಿಸಲಾಗಿರುತ್ತದೆ.
- ➢ ವಿಶ್ವವಿದ್ಯಾಲಯದ ಅಧ್ಯಯನ ಬೋಧಕ ವಿಭಾಗಗಳು (Teaching Departments) ಪ್ರತಿ ತಿಂಗಳ ಎಲ್ಲಾ ಶನಿವಾರಗಳಂದು (ಸಾರ್ವತ್ರಿಕ ರಜೆಗಳನ್ನು ಹೊರತುಪಡಿಸಿ) ಬೆಳಗ್ಗೆ ೯.೦೦ ಗಂಟೆಯಿಂದ ಮಧ್ಯಾಹ್ನ ೧.೦೦ ಗಂಟೆಯವರೆಗೆ ಅಥವ ಬೆಳಿಗ್ಗೆ ೧೦.೦೦ ಗಂಟೆಯಿಂದ ಮಧ್ಯಾಹ್ನ ೨.೦೦ ಗಂಟೆಯವರೆಗೆ ತರಗತಿಗಳನ್ನು ನಡೆಸಬಹುದು.
- ➢ ಎರಡನೇ ಮತ್ತು ನಾಲ್ಕನೇ ಶನಿವಾರಗಳಂದು ಕಾರ್ಯನಿರ್ವಹಿಸುವ ಬೋಧಕೇತರ ಮತ್ತು ತಾಂತ್ರಿಕ ಸಿಬ್ಬಂದಿ ತಿಂಗಳಿಗೆ ಒಂದು ದಿನದ ಪರಿಹಾರ ರಜೆ ಪಡೆಯಲು ಅರ್ಹರಾಗಿರುತ್ತಾರೆಂದು ಅಧಿಸೂಚಿಸಲಾಗಿರುತ್ತದೆ.

ಆದರೆ, ಸಿಬ್ಬಂದಿಯವರು ಪ್ರತಿ ೨ನೇ ಮತ್ತು ೪ನೇ ಶನಿವಾರ ಸರ್ಕಾರದ ಆದೇಶದನ್ವಯ ರಜೆ ನೀಡಬೇಕಾಗಿ ವಿನಂತಿಸಿರುತ್ತಾರೆ. ಯು.ಜಿ.ಸಿಯ ನಿಯಮಗಳ ಅನುಸಾರ ಬೋಧಕ ವಿಭಾಗದವರು ವರ್ಷಕ್ಕೆ ೧೮೦ ದಿನ ಕೆಲಸ ಮಾಡಬೇಕಾಗಿರುವುದರಿಂದ ಉಳಿದ ಶನಿವಾರಗಳಂದು ಪೂರ್ಣ ದಿನ ಕೆಲಸ ಮಾಡುವುದು.

ಪ್ರತಿ ೨ನೇ ಮತ್ತು ೪ನೇ ಶನಿವಾರಗಳಂದು ಬೋಧಕ ವಿಭಾಗಗಳೂ ಸೇರಿದಂತೆ ವಿಶ್ವವಿದ್ಯಾಲಯಕ್ಕೆ ರಜೆ ನೀಡುವ ಹಾಗೂ ಇನ್ನುಳಿದ ಶನಿವಾರಗಳಂದು ಪೂರ್ಣ ಅವಧಿಗೆ ಕಾರ್ಯನಿರ್ವಹಿಸುವ ಕುರಿತು ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ)

**Subject No. 8: To consider declaration of second and fourth Saturday of every month as General Holiday for offices and teaching depts. of the KSRDPR University – reg.**

**Reference Note:**

The Executive Council in its special meeting held on 07-08-2019 has resolved as under:

- ➢ Fourth Saturday of every month be declared as General Holiday for the Offices of the KSRDPR University in addition to second Saturday

as per Govt. Notification No. DPAR 2 HHL 2019, dated 13 June 2019 and reduce the number of Casual Leave from 15 to 10 days.

- The Teaching Departments shall work on all Saturdays either from 9.00 am to 1.00 pm or 10.00 am to 2.00 pm i.e., half day.

- The Non-Teaching / Technical Staff whose services are utilized on second and fourth Saturdays are eligible for one full day compensatory leave per month.

However, the staff have requested to grant holidays as per the Govt. Order on Second and fourth Saturdays and they would work for full day on remaining Saturdays to keep-up with the UGC requirement of 180 teaching working days in an academic year.

The proposal of declaring holidays for the University on every Second and fourth Saturdays of the month and working for full time on the remaining Saturdays of the month is placed before the Executive Council for consideration and approval. (Related copies placed at Annexure 1)

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ವಿವರಿಸಿದರು. ಇದಕ್ಕೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ರಾಜೇಂದ್ರ ಪ್ರಸಾದ ಹಾಗೂ ವಿ.ಟಿ.ಯು. ನ ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ ಇವರು ಮಾತನಾಡಿ, ಪಠ್ಯಕ್ರಮ ಪೂರ್ಣಗೊಳಿಸಲು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರತೀಕೂಲ ಪರಿಣಾಮವಾಗದಂತೆ, ಎಚ್ಚರಿಕೆ ವಹಿಸಿ ಸದರಿ ಪ್ರಸ್ತಾವನೆಯನ್ನು ಜಾರಿಗೆ ತರಬಹುದು ಎಂದರು. ಇದಕ್ಕೆ ಶ್ರೀ ಜಿ.ಬಿ.ಶಿವರಾಜು ಇವರು ಮಾತನಾಡಿ, ಈಗಿನ ಕೋವಿಡ್ ಪರಿಸ್ಥಿತಿಯಲ್ಲಿ, ಈ ಕ್ರಮ ಕೈಗೊಳ್ಳುವುದು ಅತ್ಯಂತ ಸೂಕ್ತವಾಗಿದೆ ಎಂದರು. ಶ್ರೀ ಪ್ರಕಾಶ ಭಟ್, ಇವರು ಮಾತನಾಡಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಒಂದೇ ದಿನಗಳಂದು ಕರ್ತವ್ಯ ಮಾಡುವುದು/ ರಜೆ ನೀಡುವುದರಿಂದ, ಎಲ್ಲರೂ ಒಟ್ಟಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತೆ ಹಾಗೂ ಇದು ಅಪೇಕ್ಷಣೀಯ ಕೂಡ ಎಂದು ತಿಳಿಸಿದರು. ಮುಂದುವರೆದು, ಸದರಿ ದಿನಗಳಂದು, ವಿಶ್ವವಿದ್ಯಾಲಯವು ಕೈಗೊಳ್ಳುತ್ತಿರುವ ವಿಸ್ತೀರಣಾ ಚಟುವಟಿಕೆಗಳಿಗೆ ಹಾಗೂ ಅವಶ್ಯಕ ಕಾರ್ಯಗಳಿಗೆ ಅನಾನುಕೂಲವಾಗದಿರುವಂತೆ ಸೂಕ್ತ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕುಲಪತಿಗಳು ಸಭೆಗೆ ಭರವಸೆ ನೀಡಿದರು.

ಮೇಲ್ಕಂಡ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

ವಿಷಯ ಸಂಖ್ಯೆ ೯: ೨೦೨೦–೨೧ ನೇ ಸಾಲಿಗೆ ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನಾ ವೆಚ್ಚವನ್ನು ಪಾವತಿಸುವ ಬಗ್ಗೆ.

**ಪರಾಮರ್ಶನ ಟಿಪ್ಪಣಿ:–**

ವಿಶ್ವವಿದ್ಯಾಲಯ ನಿರ್ವಹಿಸಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಾಸ್ತವ್ಯವಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮುಂಗಡ ಭೋಜನಾ ವೆಚ್ಚವನ್ನು ಪಾವತಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದೆ. ಈ ಭೋಜನಾ ವೆಚ್ಚವನ್ನು ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ ೧೫೦೦/– (ರೂ ಒಂದು ಸಾವಿರದ ಐದುನೂರು ಮಾತ್ರ) ರಂತೆ ವರ್ಷದ ೧೧ ತಿಂಗಳ ಅವಧಿಗೆ ಮಂಜೂರಾತಿ ನೀಡಿ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ರಾಜ್ಯದ ಇತರೆ ವಿಶ್ವವಿದ್ಯಾಲಯಗಳು ಸಹ ಸದರಿ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸಿ ನಂತರ ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡುವ ಹಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಿವೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ೨೦೧೮–೧೯ ಮತ್ತು ವಿಶ್ವವಿದ್ಯಾಲಯದ ಅಧಿಸೂಚನೆ ಆರ್‌ಡಿಪಿಆರ್‌ಯು ೪೧/೨ ಶೈಕ್ಷಣಿ ೨೦೧೯–/೨೦೧೯–೨೦ ದಿನಾಂಕ ೧೩–೮–೨೦೧೯ ರನ್ವಯ, ೨೦೧೯–೨೦ನೇ ಸಾಲಿಗೆ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ ೧೫೦೦/– (ರೂ ಒಂದು ಸಾವಿರದ ಐದುನೂರು ಮಾತ್ರ) ರಂತೆ ಒಟ್ಟು ವರ್ಷದ ೧೧ ತಿಂಗಳ ಅವಧಿಗೆ ಪಾವತಿಸಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ ೧೫೯ ಪಕವಿ ೨೦೧೮ (ಭಾ), ಬೆಂಗಳೂರು ದಿನಾಂಕ ೧೯–೭–೨೦೧೯ ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು ಮಾಹೆಯಾನ ೧೬೦೦ ರಂತೆ ಹೆಚ್ಚಿಸಿ ಆದೇಶಿಸಿದೆ. ವಿಶ್ವವಿದ್ಯಾಲಯ ನಡೆಸುತ್ತಿರುವ ಹತ್ತು ಸ್ನಾತಕೋತ್ತರ ಕೋರ್ಸುಗಳಿಗೆ ೨೦೨೦–೨೧ನೇ ಶೈಕ್ಷಣಿಕ ಸಾಲಿನಲ್ಲಿ ಸುಮಾರು ೬೪ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ನಿರೀಕ್ಷೆಯಿದೆ. ಕಳೆದ ಸಾಲಿನಲ್ಲಿ ಪ್ರವೇಶ ಪಡೆದು ಮುಂದುವರೆಯುತ್ತಿರುವ ೧೯ ವಿದ್ಯಾರ್ಥಿಗಳಿದ್ದು ೨೦೨೦–೨೧ನೇ ಸಾಲಿಗೆ ಪ್ರವೇಶ ಪಡೆಯಬಹುದಾದ ಅಂದಾಜು ೬೪ ವಿದ್ಯಾರ್ಥಿಗಳಿಗೆ (೧೯+೬೪=೮೩) ಮಾಹೆಯಾನ ಪ್ರತಿ ವಿದ್ಯಾರ್ಥಿಗೆ ರೂ. ೧,೬೦೦/– ಪ್ರಕಾರ ಒಂದು ತಿಂಗಳಿಗೆ ರೂ. ೧,೩೨,೮೦೦/– ವೆಚ್ಚವಾಗಲಿದೆ.

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣ ನಿರೀಕ್ಷಿಸಿ ಮೇಲಿನ ವೆಚ್ಚವನ್ನು ೨೦೨೦–೨೧ನೇ ಸಾಲಿನಲ್ಲಿ ಭರಿಸಲು ಕಾರ್ಯನಿರ್ವಾಹಕ ಪರಿಷತ್‌ನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ)

**Subject No. 9: Payment of Advance EBL (ಭೋಜನಾ ವೆಚ್ಚ) to SC/ST students residing in the hostels run and maintained by the University.**

**Reference Note:**

The State Government has made a provision to pay EBL charges (ಭೋಜನಾ ವೆಚ್ಚ) for the students belonging to SC / ST communities residing in the hostels run and maintained by the University. It is to be noted that the EBL charges are sanctioned from the Social Welfare Department to the University Hostel account at the rate of Rs.1500/-(Rs

One thousand five hundred Only) per month per student for a duration of eleven months in an academic year. The aforesaid EBL charges are usually sanctioned at the end of the Academic year. The procedure followed by different University in the State is that the University pays the EBL charges to the students upfront and the same is adjusted after the amount is released from the Social Welfare Department.

As per Govt Order No: ಸಕಇ 159 ಪಕವಿ 2018 (ಭಾ), ಬೆಂಗಳೂರು ದಿನಾಂಕ 19-7-2019 the Students EBL charges is increased to Rs. 1,600/- per Month per student.

Based on seat matrix of admissions around 64 students belonging to SC/ST are expected to be admitted to the University in the academic year. Presently, there are 19 students staying in the University hostels, who were admitted during the last academic year. The EBL charges for all these students (19+64=83) accounts to around Rs. 1,32,800/- per month.

The matter is placed before the Executive Council for consideration and approval to incur the expenditure pending reimbursement from the Social Welfare Department, Govt. of Karnataka. (Related copies placed at Annexure 1)

**ನಿರ್ಣಯ**

ಸದರಿ ವಿಷಯದ ಕುರಿತು ಕುಲಪತಿಗಳು ವಿವರಿಸಿದರು. ಸರ್ಕಾರದ ಆದೇಶದ ಅನ್ವಯ (ಭೋಜನಾ ವೆಚ್ಚ) ಪಾವತಿಸುತ್ತಿರುವುದರಿಂದ, ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೦: ವಿಶ್ವವಿದ್ಯಾಲಯದ ೨೦೨೦-೨೧ನೇ ಶೈಕ್ಷಣಿಕ ಸಾಲಿಗೆ ವಿವಿಧ ಪ್ರೋಗ್ರಾಮುಗಳ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, ಅರ್ಹತಾ ಮಾನದಂಡಗಳು, ಮತ್ತು ಪ್ರವೇಶಕ್ಕಾಗಿ ಮಾರ್ಗಸೂಚಿಗಳು, ಪ್ರವೇಶಾತಿ ಅಧಿಸೂಚನೆಯ ವಿಷಯಗಳನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದ ೨೦೨೦-೨೧ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಿಸುವ ಕುರಿತು ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ ೫(VII), ೫೭, ಹಾಗೂ ೭೨ ರನ್ವಯ, ಕುಲಪತಿಗಳು ಪ್ರಥಮ ವರ್ಷದ ಪ್ರವೇಶ ಹಾಗೂ ಪರೀಕ್ಷೆ (ಅನುಬಂಧ-೧), ದ್ವಿತೀಯ ವರ್ಷದ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ

(ಅನುಬಂಧ-೨) ಅರ್ಹತಾ ಮಾನದಂಡಗಳು (ಅನುಬಂಧ-೩) ಮತ್ತು ಪ್ರವೇಶಕ್ಕಾಗಿ ಮಾರ್ಗಸೂಚಿಗಳನ್ನು (ಅನುಬಂಧ-೪) ಹಾಗೂ ಪ್ರವೇಶಾತಿ ಅಧಿಸೂಚನೆಯನ್ನು (ಅನುಬಂಧ-೫) ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಹಾಗೂ K.S.R.D.P.R UNIVERSITY ORDINANCES GOVERNING THE ADMISSION OF STUDENTS TO THE VARIOUS COURSES, PAYMENT OF FEES, SCHOLARSHIP, CONDUCT AND RESIDENCE OF STUDENTS, ೨೦೧೯. ಗಳ ಪ್ರಕಾರ ಅಧಿಸೂಚಿಸಲಾಗಿರುತ್ತದೆ. ಸದರಿ ಅಧಿಸೂಚನೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ. (ಅನುಬಂಧ ೧,೨,೩,೪ ಮತ್ತು ೫ ರಲ್ಲಿ ಲಗತ್ತಿಸಲಾಗಿದೆ.)

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**Subject No 10: To Consider the Admission and Examination Fee Structure, Eligibility Criteria, Guidelines for Admission and Admission Notification of the University-reg.**

**Reference Note:**

The University has started its academic activities for the academic year 2020-21. The First Year Admission and Exam Fee Structure (Annexure-1), Second year Admission and Examination Fee Structure (Annexure-2), Eligibility Criteria (Annexure-3), Guidelines for Admission (Annexure-4) and Admission Notification (Annexure-5), have been notified as per section 5 (VII), 57, and 72 of University Act, after a meeting with Officers of the University for the academic year 2020-21 and as per ordinances of K.S.R.D.P.R UNIVERSITY ORDINANCES GOVERNING THE ADMISSION OF STUDENTS TO THE VARIOUS COURSES, PAYMENT OF FEES, SCHOLARSHIP, CONDUCT AND RESIDENCE OF STUDENTS, 2019. (Related copies placed at Annexure 1,2,3,4 and 5)

This matter is placed before Executive Council for kind perusal and approval.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ವಿವರಿಸಿದರು. ಹಿಂದಿನ ಸಾಲಿನಲ್ಲಿ ಆಗಿರುವ ಪ್ರವೇಶಾತಿಗಳ ಕುರಿತಂತೆ, ವಿ.ಟಿ.ಯು. ನ ಕುಲಪತಿಗಳಾದ ಪ್ರೊ.ಕರಿಸಿದ್ದಪ್ಪ ಇವರು, ವಿವರಣೆ ಕೋರಿದರು. ಅದಕ್ಕೆ ಕುಲಪತಿಗಳು ಸವಿಸ್ತಾರವಾಗಿ ವಿವರಿಸಿದರು ಹಾಗೂ ಈಗಿರುವ ಕಾರ್ಯಕ್ರಮಗಳನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ದೃಷ್ಟಿಯಿಂದ 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಯಾವುದೇ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸದಿರಲು ನಿರ್ಧರಿಸಲಾಗಿದೆ ಎಂಬ ಅಂಶವನ್ನು ತಿಳಿಸಿದರು ಹಾಗೂ ಈ ವರ್ಷದ ಸಾಂಕ್ರಾಮಿಕ ರೋಗದ ಪರಿಸ್ಥಿತಿಯಲ್ಲಿಯೂ ಸಹ ಪ್ರತಿ ಕಾರ್ಯಕ್ರಮಕ್ಕೆ ನಿಗದಿಪಡಿಸಲಾಗಿರುವ ಸೀಟ್ ಗಳನ್ನು ಭರ್ತಿ ಮಾಡುವಲ್ಲಿ ಎಲ್ಲ ಸಿಬ್ಬಂದಿಯವರು ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

ಶ್ರೀ ಜಿ.ಬಿ.ಶಿವರಾಜು ಇವರು, ವಿಶ್ವವಿದ್ಯಾಲಯದ ಮಾಹಿತಿಯುಳ್ಳ Brochures, Posters, Pamphlets ಇತ್ಯಾದಿಗಳನ್ನು ವಿಶಿಷ್ಟವಾಗಿ ವಿನ್ಯಾಸಗೊಳಿಸಿ ವ್ಯಾಪಕ ಪ್ರಚಾರ ಮಾಡುವಂತೆ ಸಲಹೆ ನೀಡಿದರು. ಶ್ರೀ ಬಿ.ಜಿ.ಗೋವಿಂದಪ್ಪ ಇವರು ರಾಜ್ಯವ್ಯಾಪಿ ಹಾಗೂ ದೇಶ ವ್ಯಾಪಿ ಸಂಬಂಧಪಟ್ಟ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಮಾಹಿತಿ ತಲುಪಿಸುವ ಕಾರ್ಯ ಕೈಗೊಳ್ಳಬೇಕು ಎಂದು ತಿಳಿಸಿದರು. ಈಗಾಗಲೇ ಇದರ ಕುರಿತು ಕ್ರಮ ಕೈಗೊಳ್ಳಲಾಗುತ್ತಿರುವುದಾಗಿ ಕುಲಸಚಿವರು ತಿಳಿಸಿದರು. ಶ್ರೀ ಪ್ರಕಾಶ್ ಭಟ್ ರವರು ಮಾತನಾಡುತ್ತ, ಪತ್ರಿಕಾ ಮಾಧ್ಯಮದಲ್ಲಿ, ವಿಶ್ವವಿದ್ಯಾಲಯದ ಕುರಿತಂತೆ ಸರಣಿ ಲೇಖನಗಳನ್ನು ಬರೆದು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಹೆಚ್ಚು ಪ್ರಚಾರ ಮಾಡುವುದು ಸೂಕ್ತ ಎಂದು ತಿಳಿಸಿದರು. ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಟಿ.ವಿ.ಕಟ್ಟಿಮನಿ ಯವರು ಮಾತನಾಡಿ, ಪತ್ರಿಕೆಗಳಲ್ಲಿ ಅಥವಾ ಅದರಲ್ಲಿ ಬರುವ ವಿಶೇಷ ಶೈಕ್ಷಣಿಕ ಪುರವಣಿಗಳಲ್ಲಿ ಜಾಹಿರಾತು ನೀಡುಬೇಕು ಎಂದು ತಿಳಿಸಿದರು. ಇದಕ್ಕೆ ಕುಲಪತಿಗಳು, ಮಾತನಾಡಿ, ಈಗಾಗಲೇ, ಇದರ ಕುರಿತಂತೆ, "ಮೀಡಿಯಾ ಸೆಲ್" ರಚಿಸಲಾಗಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು, ಇದರ ಕುಲಪತಿಗಳಾದ, ಪ್ರೊ.ರಾಜೇಂದ್ರ ಪ್ರಸಾದ ಮಾತನಾಡಿ, ವಿಶ್ವವಿದ್ಯಾಲಯದ Brochures ಗಳ ಪ್ರತಿ ಕಳಿಸಿದ್ದಲ್ಲಿ, ಅವರ ವೆಬಸೈಟ್ ನಲ್ಲಿ ಪ್ರದರ್ಶನ ಮಾಡಲಾಗುವುದು ಎಂದು ತಿಳಿಸಿದರು.

ಡಾ.ಅರುಣ್ ಪಾಟೀಲ್, ಇವರು ಮಾತನಾಡುತ್ತ, ವಿಶ್ವವಿದ್ಯಾಲಯದ ಪ್ರಚಾರವನ್ನು ಪ್ರಿಂಟ್ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಮಾಡುಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು. ಇದರ ಜೊತೆಗೆ, ವಿದ್ಯಾರ್ಥಿಗಳ, ಪ್ಲೇಸಮೆಂಟ್ಸ್, ಕುರಿತು ಮಾಹಿತಿ ಕೇಳಿದರು. ಅದಕ್ಕೆ ಕುಲಪತಿಗಳು, ವಿದ್ಯಾರ್ಥಿಗಳ ಪ್ಲೇಸಮೆಂಟ್ಸ್ ಗೆ ಅನುಕೂಲವಾಗಲು, "ನೈಪುಣ್ಯ ಕೇಂದ್ರ" ಸ್ಥಾಪಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ, ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮೀಸಲಾತಿ/ ಆದ್ಯತೆ ನೀಡಲು ಸಮಿತಿ ರಚಿಸಿ, ಅದರ ಶಿಫಾರಸ್ಸುಗಳನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಇದರ ಜೊತೆಗೆ, ಮೈರಾಡಾ ಸಂಸ್ಥೆಯ ಅರವಿಂದ್ ರಿಷಬುಡ್ ಭಾ.ಆ.ಸೇ (ನಿ), ಇವರ ಜೊತೆ ವಾಲಂಟರಿ ಕ್ಷೇತ್ರದ ಕುರಿತು, ವಿದ್ಯಾರ್ಥಿಗಳ ವೆಬಿನಾರ್ ಆಯೋಜಿಸಲಾಗಿರುವುದಾಗಿ ತಿಳಿಸಿದರು.

ವಿ.ಟಿ.ಯು. ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಇವರು ಮಾತನಾಡಿ, ವಿದ್ಯಾರ್ಥಿಗಳಿಗೆ, ಸ್ಕಾಲರಶಿಪ್, ಫೀಸ್ ರಿಯಾಯಿತಿ, ಫೆಲೋಶಿಪ್‌ಗೆ ಸಂಬಂಧಪಟ್ಟಂತೆ ಮಾಹಿತಿ ಕೋರಿದರು. ಅದಕ್ಕೆ ಕುಲಪತಿಗಳು, ಪ್ರಸ್ತುತ, ಸರ್ಕಾರದ ನಿಯಮಗಳನುಸಾರ ಸಂಬಂಧಪಟ್ಟ ಇಲಾಖೆಯಿಂದ ಸ್ಕಾಲರ್‌ಶಿಪ್/ಫಿ ರಿಯಾಯಿತಿ ಪಡೆಯುತ್ತಿದ್ದಾರೆ, ಇದರ ಜೊತೆಗೆ, ಸರ್ಕಾರದ ಮೂಲದ ಜೊತೆಗೆ ಇತರೆ ಮೂಲಗಳನ್ನು ಕಂಡುಕೊಳ್ಳಲು, ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮೇಲ್ಕಂಡ ಸವಿಸ್ತಾರವಾದ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೧: ಕಾರ್ಯನಿರ್ವಾಹಕ ಎಂಜಿನಿಯರ್ ಇವರನ್ನು ಡೆಪ್ಯುಟೇಷನ್ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ**

**ಪರಾಮರ್ಶನ ಟಿಪ್ಪಣಿ:**

ವಿಶ್ವವಿದ್ಯಾಲಯ ೨೦೧೭-೧೮ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಸ್ತುತ ವಿಶ್ವವಿದ್ಯಾಲಯ ೧೦ ಸ್ನಾತಕೋತ್ತರ ಕೋರ್ಸ್‌ಗಳನ್ನು ನೀಡುತ್ತಿದೆ. ವಿಶ್ವವಿದ್ಯಾಲಯ ತನ್ನ ಧ್ಯೇಯೋದ್ದೇಶಗಳನ್ನು ಪೂರೈಸಲು ಪೋಷಕ ಸಿಬ್ಬಂದಿ (ಭೋದಕ, ಸಂಶೋಧನೆ ಮತ್ತು ಭೋದಕೇತರ) ಹೊಂದುವುದು ಅವಶ್ಯವಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ ೦೨ ಜಿಪಸ ೨೦೧೭ ದಿನಾಂಕ ೧೧-೦೫-೨೦೧೭ ಮತ್ತು ತಿದ್ದುಪಡಿ ಆದೇಶ ದಿನಾಂಕ ೨೧-೦೬-೨೦೧೭ದ ಅನುಸಾರ ಸಾಮಾನ್ಯ ನೇಮಕಾತಿಗಳು ಇನ್ನೂ ಆಗಬೇಕಿದೆ. ಪ್ರಸ್ತುತ ಕೋವಿಡ್-೧೯ ಪಿಡುಗಿನ ಕಾರಣ ಸರ್ಕಾರ ಬೋಧಕ ಮತ್ತು ಬೋಧಕೇತರ ಖಾಯಂ ನೇಮಕಾತಿಗೆ ನಿರ್ಬಂಧಗಳನ್ನು ವಿಧಿಸಿದೆ.

ಮುಂದುವರಿದು, ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ಸಿನ ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿದೆ. ವಿಶ್ವವಿದ್ಯಾಲಯದಲ್ಲಿ ಪಿ.ಆರ್.ಈ.ಡಿ ಇಂದ ಡೆಪ್ಯೂಟೇಶನ್ ಮೇಲೆ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಕೆ. ಆರ್. ಮಠದ್, ಇವರು ಇತ್ತೀಚೆಗೆ ಅನಾರೋಗ್ಯದ ಕಾರಣ ವಿಧಿವಶರಾದರು. ಆದ ಕಾರಣ, ಆ ಹುದ್ದೆ ಪ್ರಸ್ತುತ ಖಾಲಿ ಇದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ, ವಿಶ್ವವಿದ್ಯಾಲಯದ ಎಸ್ಟೇಟ್ ಅಧಿಕಾರಿಗಳಾದ ಶ್ರಿ ಎಮ್. ಬಸನಗೌಡ, ಇವರನ್ನು, ಮುಂದಿನ ಆದೇಶದವರೆಗೆ, ಹೆಚ್ಚುವರಿಯಾಗಿ ತಮ್ಮ ಹುದ್ದೆಯ ಕರ್ತವ್ಯದ ಜೊತೆಗೆ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಯ ಪ್ರಭಾರವನ್ನು ವಹಿಸಲಾಗಿದೆ. ಆದುದರಿಂದ ಒಬ್ಬ ಪರ್ಯಾಯ ಸಿಬ್ಬಂದಿಯನ್ನು ನಿಯೋಜನೆ ಆಧಾರದ ಮೇಲೆ ನೇಮಕಾತಿ ಮಾಡುವುದು ತಕ್ಷಣದ ಅಗತ್ಯವಿದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Subject No. 11: To avail the services of Executive Engineer on Deputation from RDPR Dept**

**Reference note:**

The University started functioning from the academic year 2017-18. At present University is offering 10 Postgraduate Courses. In order to implement the objectives of the University, it is necessary to have the essential supporting staff, teaching, research and administrative/technical personnel. Regular appointments against the posts sanctioned by the Government vide Govt. Orders ಸಂಖ್ಯೆ: ಗ್ರಾಅಪ 02 ಜಿಪಸ 2017 ದಿನಾಂಕ 11-05-2017 ಮತ್ತು ತಿದ್ದುಪಡಿ ಆದೇಶ ದಿನಾಂಕ 21-06-2017, are yet to be made. In the present situation of COVID-19 pandemic, the Government has imposed restrictions on recruitment of regular teaching and non-teaching staff throughout the State.

Further, construction of buildings in the new Campus is under progress. The Executive Engineer Shri K. R. Mathad, who was on deputation from PRED has passed away recently due to ill-health. Consequently, that post has become vacant. Therefore, for smooth conduct of construction and administrative activities, Shri M. Basangoud, Assistant Executive Engineer/Estate Officer, is placed in charge of the post of Executive Engineer, in addition to his current duties until further orders. There is an immediate need to avail services of alternate staff on deputation basis.

Therefore, the matter is placed before Executive Council for kind perusal and approval to take on deputation of an Executive Engineer.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಪತಿಗಳು ಕಾರ್ಯನಿರ್ವಾಹಕ ಎಂಜಿನಿಯರ್ ರವರ ಅಗತ್ಯತೆಯನ್ನು ವಿವರಿಸಿದರು. ವಿಶ್ವವಿದ್ಯಾಲಯದಲ್ಲಿ, ಈಗಾಗಲೇ ಹಲವು ಕಟ್ಟಡ ಕಾಮಗಾರಿಗಳು ಜರಗುತ್ತಿವೆ, ಇದಕ್ಕೆ ಸಂಬಂಧಪಟ್ಟಂತೆ, ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ ಕಾರಣ, ಆಡಳಿತಾತ್ಮಕ ಹಿತದೃಷ್ಟಿಯಿಂದ ಶ್ರೀ ಕೆ.ಆರ್.ಮಠದ ಇವರ ನಿಧನದಿಂದ ತೆರವಾದ ಸ್ಥಾನವನ್ನು ಎಸ್ಟೇಟ್ ಆಫೀಸರ್ ರಾದ (ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸಮಾನಾಂತರ ಹುದ್ದೆ) ಶ್ರೀ ಎಮ್. ಬಸನಗೌಡ ಇವರಿಗೆ ತಮ್ಮ ಹುದ್ದೆಯ ಜೊತೆಗೆ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ನೀಡಲಾಗಿರುತ್ತದೆ. ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ಕಾರ್ಯನಿರ್ವಾಹಕ ಅಭಿಯಂತರರ ಸೇವೆಯು ಅವಶ್ಯವಾಗಿ ಬೇಕಾಗಿರುವುದರಿಂದ, ಪೂರ್ಣಕಾಲಿಕವಾಗಿ ಸದರಿ ಹುದ್ದೆಗೆ ನೌಕರರು ಕರ್ತವ್ಯಕ್ಕೆ ಹಾಜರಾಗುವವರೆಗೂ, ಕಟ್ಟಡ ಕಾಮಗಾರಿಗಳ ಪ್ರಗತಿ ಕುಂಠಿತವಾಗದಿರುವಂತೆ ಕ್ರಮವಹಿಸಲು, ಎಸ್ಟೇಟ್ ಆಫೀಸರ್ ರವರಿಗೆ ನೀಡಿದ ಹೆಚ್ಚುವರಿ ಪ್ರಭಾರದ ವ್ಯವಸ್ಥೆಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

ಮುಂದುವರೆದು, ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗೆ ಸದ್ಯದ ಪರಸ್ಥಿತಿಗೆ ನಿಯೋಜನೆ ಮೇರೆಗೆ ಒಬ್ಬ ನೌಕರರ ಸೇವೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ ಎಂದು ವಿವರಿಸಿದರು. ಇದಕ್ಕೆ ಕುಲಪತಿಗಳ ಹಂತದಲ್ಲಿ ನಿಯಮಾನುಸಾರ, ಸೂಕ್ತ ತೀರ್ಮಾನ ಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದನೆ ನೀಡಿತು.

ವಿಷಯ ಸಂಖ್ಯೆ ೧೨: ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರಕ್ಕೆ ಸಹಾಯಕ ನಿರ್ದೇಶಕರು, ವಿಶೇಷಾಧಿಕಾರಿ(ಕುಲಪತಿರವರ ಆಪ್ತ ಶಾಖೆ), ಸಹಾಯಕ ಎಂಜಿನಿಯರ್(ಎಲೆಕ್ಟ್ರಿಕಲ್), ಸಿಸ್ಟಮ್ ಮ್ಯಾನೇಜರ್, ತೋಟಗಾರಿಕೆ ಅಧೀಕ್ಷಕರು, **Research Fellows,** ಬೋಧಕ ಮತ್ತು ಇತರೆ ಬೋಧ'ಕೇತರ ಸಿಬ್ಬಂದಿಯನ್ನು ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡುವ ಬಗ್ಗೆ.

**ಪರಾಮರ್ಶನ ಟಿಪ್ಪಣಿ:**

ವಿಶ್ವವಿದ್ಯಾಲಯ ೨೦೨೦-೨೧ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಸ್ತುತ ವಿಶ್ವವಿದ್ಯಾಲಯ ೧೦ ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸುವ ಜೊತೆಗೆ, ವಿವಿಧ ತರಬೇತಿ ಕಾರ್ಯಕ್ರಮಗಳನ್ನು, ವಿಸ್ತೀರ್ಣ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯ ತನ್ನ ಧ್ಯೇಯೋದ್ದೇಶಗಳನ್ನು ಪೂರೈಸಲು ಅಗತ್ಯ ಸಿಬ್ಬಂದಿ(ಬೋಧಕ, ಸಂಶೋಧನೆ ಮತ್ತು ಭೋದಕೇತರ) ಹೊಂದುವುದು ಅವಶ್ಯವಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ ೦೨ ಜಿಪಸ ೨೦೧೭ ದಿನಾಂಕ ೧೧-೦೫-೨೦೧೭ ಮತ್ತು ತಿದ್ದುಪಡಿ ಆದೇಶ ದಿನಾಂಕ ೨೧-೦೬-೨೦೧೭ದ ಅನುಸಾರ ಸಾಮಾನ್ಯ ನೇಮಕಾತಿಗಳು ಇನ್ನೂ ಆಗಬೇಕಿದೆ. ಪ್ರಸ್ತುತ ಕೋವಿಡ್-೧೯ ಪಿಡುಗಿನ ಕಾರಣ ಸರ್ಕಾರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಖಾಯಂ ನೇಮಕಾತಿಗೆ ನಿರ್ಬಂಧಗಳನ್ನು ವಿಧಿಸಿದೆ.

ಮುಂದುವರಿದು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರಕ್ಕೆ ಸಹಾಯಕ ನಿರ್ದೇಶಕರು, ವಿಶೇಷಾಧಿಕಾರಿ(ಕುಲಪತಿಯವರ ಆಪ್ತ ಶಾಖೆ), ಸಹಾಯಕ ಎಂಜಿನಿಯರ್(ಎಲೆಕ್ಟ್ರಿಕಲ್), ಸಿಸ್ಟಮ್ ಮ್ಯಾನೇಜರ್, ತೋಟಗಾರಿಕೆ ಅಧೀಕ್ಷಕರು, Research Fellows, ಬೋಧಕ ಮತ್ತು ಇತರೆ ಬೋಧ'ಕೇತರ ಹುದ್ದೆಗಳು ಭರ್ತಿ ಮಾಡುವ ಅಗತ್ಯವಿದೆ. ಖಾಯಂ ನೇಮಕಾತಿಗಳು ಆಗುವವರೆಗೆ ಸದರಿ ಹುದ್ದೆಗಳನ್ನು ತಾತ್ಕಾಲಿಕ ಕಾಂಟ್ರಾಕ್ಟ್/ ಡೆಪ್ಯುಟೇಷನ್ ಆಧಾರದ ಮೇಲೆ ನೇಮಕಾತಿ ಮಾಡಬೇಕಿದೆ.

ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕ ಕಾಂಟ್ರಾಕ್ಟ್/ ಡೆಪ್ಯುಟೇಷನ್ ಆಧಾರದ ಮೇಲೆ ಅಗತ್ಯತೆಗಳಿಗನುಗುಣವಾಗಿ ಸೇವೆಗಳನ್ನು ಪಡೆದುಕೊಳ್ಳವ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ ಮಾಡಬೇಕಿದೆ.

**Subject No. 12: To consider and approve the engagement of Assistant Director to the Centre for Research Innovation and Evaluation, Special officer to Vice-Chancellor, Asst Engineer(Electrical), System Manager, Horticulture Superintendent, Research Fellows, Teaching and other Administrative staff in accordance with the sanctioned posts on temporary contract basis.**

**REFERENCE NOTE:**

The University has started the academic activities for the year 2020-21. At present University is offering 10 Postgraduate Courses. In order to implement the objectives of the University, it is necessary to have the essential supporting staff, teaching, research and administrative/technical personnel. Regular appointments against the

posts sanctioned by the Government vide Govt. Orders ಸಂಖ್ಯೆ: ಗ್ರಾಅಪ 02 ಜಿಪಸ 2017 ದಿನಾಂಕ 11-05-2017 ಮತ್ತು ತಿದ್ದುಪಡಿ ಆದೇಶ ದಿನಾಂಕ 21-06-2017, are yet to be made. In the present situation of COVID-19 pandemic, the Government has imposed restrictions on recruitment of regular teaching and non-teaching staff throughout the State.

Further, there is need to avail the services of an Assistant Director to the Centre for Research Innovation and Evaluation, Special Officer to Vice-Chancellor's Secretariat, Assistant Engineer (Electrical), System Manager, Horticulture Superintendent, Research Fellows, Teaching and other Administrative staff in accordance with the sanctioned posts. Therefore, it is proposed to avail the services of aforesaid personnel on temporary contract basis/deputation basis to carry out the day-to-day administrative and extension activities of the University till the regular appointments are made.

The proposal is placed before the Executive Council for kind consideration and approval.

## ನಿರ್ಣಯ

ಸದರಿ ವಿಷಯದ ಕುರಿತು ಕುಲಪತಿಗಳು, ಈಗಾಗಲೇ ಹಣಕಾಸು ಸಮಿತಿಯಲ್ಲಿ ಈ ಕುರಿತು ಪ್ರಸ್ತಾಪವಾಗಿದೆ. ಆದರೆ ಸರ್ಕಾರದ ಹಣಕಾಸು ಇಲಾಖೆಯ ವಿಶೇಷ ಕಾರ್ಯದರ್ಶಿಗಳು ಖಾಯಂ ನೇಮಕಾತಿಯ ಬಗ್ಗೆ ಪ್ರಸ್ತುತ ವರ್ಷ ಕೋವಿಡ್-19 ಕಾರಣದಿಂದ ಕಷ್ಟವಾಗಬಹುದಾಗಿದೆ ಎಂದು ತಿಳಿಸಿದ್ದಾರೆ. ಆದುದರಿಂದ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಅತೀ ಅವಶ್ಯವಿರುವ ಹುದ್ದೆಗಳಿಗಾದರೂ ನೇಮಕಾತಿ ಮಾಡಲು ಅನುಮತಿ ಕೋರಿದರು.

ಮುಂದುವರೆದು, ಈಗಾಗಲೇ ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಪ್ರಸ್ತುತ ಸಾಲಿನಲ್ಲಿಯೂ ಅವರ ಕಾರ್ಯಕ್ಷಮತೆ ಹಾಗೂ ಉತ್ತಮ ಕಾರ್ಯನಿರ್ವಹಣೆಯ ಆಧಾರದ ಮೇರೆಗೆ ಅಗತ್ಯತೆಗಳನುಸಾರ ಮುಂದುವರೆಸಲು ಕೋರಿದ ಪ್ರಸ್ತಾವನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಲು ನಿರ್ಣಯಿಸಿತು. ಹೊಸ ಸಿಬ್ಬಂದಿಗಳನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಕುರಿತು, ಪ್ರೊ. ಜಿ.ಬಿ.ಶಿವರಾಜು ಅವರು ಆಯಾ ಹುದ್ದೆಗೆ ಬದ್ಧತೆ ಇರುವವರನ್ನು ನೇಮಕ ಮಾಡಬೇಕು, ಒಂದು ಸಂಸ್ಥೆ ಯಶಸ್ವಿಯಾಗಿ ಬೆಳೆಯಲು ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗಳೇ ಕಾರಣ. ಹಾಗಾಗಿ ನೇಮಕಾತಿ ಮಾಡುವುದು ಅತ್ಯವಶ್ಯ ಎಂದು ತಿಳಿಸಿದರು.

ಡಾ. ಅರುಣ್ ಪಾಟೀಲ್ ಅವರು, ಯಾವುದೇ ಒತ್ತಡಕ್ಕೆ ಮಣಿಯದೇ ಸೂಕ್ತ ಅಭ್ಯರ್ಥಿಯನ್ನು ನೇಮಕ ಮಾಡಬೇಕು ಎಂದು ಹೇಳಿದರು.

ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ವಿವಿಧ ಶೈಕ್ಷಣಿಕ, ಸಂಶೋಧನಾ, ತರಬೇತಿ, ಕಟ್ಟಡ ಹಾಗೂ ವಿಸ್ತೀರಣಾ ಚಟುವಟಿಕೆಗಳನ್ನು ಪರಿಗಣಿಸಿದರೆ ವಿಷಯಸೂಚಿಯಲ್ಲಿ ತಿಳಿಸಿರುವ ಹುದ್ದೆಗಳನ್ನು ಖಾಯಂ ನೇಮಕಾತಿಯಾಗುವವರೆಗೂ, ತಾತ್ಕಾಲಿಕವಾಗಿ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳುವುದು

ಅತ್ಯವಶ್ಯಕವಾಗಿದೆ. ವಿಶ್ವವಿದ್ಯಾಲಯದ ವಿವಿಧ ಚಟುವಟಿಕೆಗಳ ಪ್ರಗತಿಯನ್ನು ಸಾಧಿಸಲು ಈಗಾಗಲೇ ಸರ್ಕಾರದಿಂದ ಅನುಮೋದನೆಯಾದ ಹುದ್ದೆಗಳನ್ನು ಕುಲಪತಿಗಳ ಹಂತದಲ್ಲಿ ನಿಯಮಾನುಸಾರ ನೇಮಕ ಮಾಡಿಕೊಳ್ಳುವಂತೆ ಸವಿಸ್ತಾರವಾದ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೩: ಡಾ. ಅಬ್ದುಲ್ ಅಜೀಜ್ ಮುಲ್ಲಾ, ಸಹಾಯಕ ನಿರ್ದೇಶಕರು, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ, ಅವರ ಸೇವಾ ಅವಧಿಯನ್ನು ಮುಂದುವರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ ೨೬-೬-೨೦೧೯ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯೊಂದಿಗೆ(ವಿಷಯ ಸಂಖ್ಯೆ ೮), ವಿಶ್ವವಿದ್ಯಾಲಯದಲ್ಲಿ ತರಬೇತಿ ಚಟುವಟಿಕೆಗಳನ್ನು ನಡೆಸಲು ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾಗಿ ಮಾಹೆಯಾನ ರೂ ೫೦,೦೦೦/- (ರೂ.ಐವತ್ತು ಸಾವಿರ ಮಾತ್ರ) ಸಂಭಾವನೆ ಮೇಲೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಹಾಗೂ ತಾತ್ಕಾಲಿಕವಾಗಿ ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರನ್ನು ನೇಮಕ ಮಾಡಲಾಗಿತ್ತು. ಪ್ರಸ್ತುತ, ಕುಲಸಚಿವರು ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ನಿರ್ದೇಶಕರ ಹುದ್ದೆಯ ಪ್ರಭಾರ ವಹಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಖಾಯಂ ನೇಮಕಾತಿಗಳು ಇನ್ನೂ ಆಗಬೇಕಾಗಿರುವುದರಿಂದ ಶ್ರೀಯುತರ ಸೇವೆಯನ್ನು ಮುಂದುವರಿಸುವುದು ಅಗತ್ಯವಾಗಿದೆ. ಇವರ ಒಂದು ವರ್ಷದ ಅವಧಿ ೩೦-೬-೨೦೨೦ ರಂದು ಮುಗಿದಿದೆ. ಆದುದರಿಂದ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯನ್ನು ಕಾಯ್ದಿರಿಸಿ ದಿನಾಂಕ ೦೨-೦೭-೨೦೨೦ ರಿಂದ ಮುಂದಿನ ಒಂದು ವರ್ಷದ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಮಾಹೆಯಾನ ರೂ. ೫೦,೦೦೦/-(ರೂ. ಐವತ್ತು ಸಾವಿರ ಮಾತ್ರ) ವೇತನವನ್ನು ಸಂಚಿತಗೊಳಿಸಿ ಅವರ ಸೇವೆಯನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇರೆಗೆ ಮಾಡಿಕೊಳ್ಳಲಾಗಿರುತ್ತದೆ.

ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರ ಸೇವೆಯನ್ನು ಮುಂದುವರಿಸುವ ವಿಷಯ ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**Subject No 13: To consider continuation of term of Dr. Abdul Aziz as Assistant Director of Centre of Training, Publication and Supervision.**

**Reference Note:**

Dr. Abdul Aziz Mulla was appointed as the Assistant Director of Centre for Training, Publication & Supervision after the approval in the Executive Council meeting held on 26/6/2019 vide Agenda No 8 to carry out training related activities in the University on temporary full-time contract basis with a consolidated remuneration of Rs. 50,000/- per month for a period of one year. Presently, Registrar is placed in-charge as the Director of Centre for Training, Publication & Supervision. As the

regular appointments are yet to be made in the University, his services are essential and are to be continued. His term of one year has come to an end on 30-06-2020. Therefore, pending approval of the Executive Council, he was re-engaged on temporary contract basis with a consolidated remuneration of Rs. 50,000/- per month, from 02-07-2020 for a period of one year or until further orders, whichever is earlier.

Hence, the matter of continuation of the services of Dr. Abdul Aziz is placed before the Executive Council for kind consideration and ratification.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ಮತ್ತು ಕುಲಪತಿಗಳು, ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರ ಈ ವರೆಗಿನ ಕಾರ್ಯಕ್ಷಮತೆಯನ್ನು ಪರಿಗಣಿಸಿ ಇನ್ನೊಂದು ವರ್ಷ ಅಥವಾ ಮುಂದಿನ ಆದೇಶದವರೆಗೆ ಅವರ ಸೇವೆಯನ್ನು ಮುಂದುವರಿಸಿದ್ದಕ್ಕೆ, ಅನುಸಮರ್ಥನೆಯನ್ನು ಕೋರಿದರು. ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೪: ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ವಿಶೇಷ ಕರ್ತವ್ಯಾಧಿಕಾರಿ(ಪರೀಕ್ಷೆ)ಯಾಗಿ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸುವುದು ಹಾಗೂ ಸಂಭಾವನೆಯನ್ನು ನಿಗದಿಪಡಿಸುವ್ ಕುರಿತು.**

**ಪರಾಮರ್ಶನ ಟಿಪ್ಪಣಿ:**

ವಿಶ್ವವಿದ್ಯಾಲಯದ ಪರೀಕ್ಷಾ ಪರ್ಯಾದೇಶದ(Examination Ordinance) ಅನುಸಾರ ವಿಶ್ವವಿದ್ಯಾಲಯದ ಪರೀಕ್ಷಾ ಕೆಲಸಗಳು ಸುಗಮವಾಗಿ ನಡೆಸಲು ಒಬ್ಬ ವಿಶೇಷ ಕರ್ತವ್ಯಾಧಿಕಾರಿ(ಪರೀಕ್ಷೆ) ಇವರ ಸೇವೆಯನ್ನು ಪಡೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಆದ ಕಾರಣ, ಡಾ. ಗೀತ ಬಂಗಾರಿ, ಅತಿಥಿ ಉಪನ್ಯಾಸಕರು, ಎಂ.ಎಸ್.ಡಬ್ಲ್ಯು (ಸಮಾಜ ಕಾರ್ಯ) ಇವರನ್ನು ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ, ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯನ್ನು ನಿರೀಕ್ಷಿಸಿ ದಿನಾಂಕ: ೧೬–೦೬–೨೦೨೦ ರಂದು ಮುಂದಿನ ಆದೇಶದವರೆಗೆ ವಿಶೇಷ ಕರ್ತವ್ಯಾಧಿಕಾರಿ (ಪರೀಕ್ಷೆ)ಯಾಗಿ ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿರುತ್ತದೆ.

ಪರೀಕ್ಷಾ ವಿಭಾಗದ ಕೆಲಸದ ಪ್ರಮಾಣ ಗಮನಿಸಿ, ಡಾ. ಗೀತ ಬಂಗಾರಿಯವರಿಗೆ ತಮ್ಮ ಅತಿಥಿ ಉಪನ್ಯಾಸಕ ಹುದ್ದೆಗೆ ಹೆಚ್ಚುವರಿ ಜವಾಬ್ದಾರಿಯಾಗಿ ವಿಶೇಷ ಕರ್ತವ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಲು ಹೆಚ್ಚುವರಿ ಸಂಭಾವನೆ ನಿಗದಿಪಡಿಸಬೇಕಾಗಿರುತ್ತದೆ.

ಆದುದರಿಂದ ಸದರಿ ಪ್ರಸ್ಥಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಹಾಗೂ ಅನುಸಮರ್ಥನೆಗಾಗಿ ಮತ್ತು ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿರುವ ಹುದ್ದೆಗೆ ಸಂಭಾವನೆಯನ್ನು ನಿಗದಿಪಡಿಸಲು ಮಂಡಿಸಲಾಗಿದೆ.

**Subject No. 14: To consider and approve placing of Full time Guest Faculty of KSRDPRU on additional charge to the post of Officer on Special Duty (Exams) for Examination Section and fixing of remuneration.**

**Reference Note:**

In order to conduct the University Examinations smoothly as per the procedure laid down in the University Examination Ordinance, there is a provision for appointing an Officer to look after the examination related works. In the interest of smooth conduct of examination works, pending approval of the Executive Council, Dr. Geetha Bangari, Guest Faculty, Social Work had been appointed as Officer on Special Duty (Exams.) on ad-hoc basis in addition to her duties as guest faculty with effect from 16th June 2020 until further orders.

Considering the quantum of works related to Examinations, Dr. Geeta N. Bangari, may also be paid additional monthly remuneration for the additional duties of the Officer on Special Duty (Exams) in addition to her remuneration for full time Guest Faculty, during her period of engagement as full time guest faculty in the University.

The matter is placed before the Executive Council for kind consideration and ratification and further, for fixing the additional remuneration for the additional works assigned to her.

ನಿರ್ಣಯ

ಸದರಿ ವಿಷಯದ ಕುರಿತು ಕುಲಪತಿಗಳು ವಿವರಿಸಿದರು. ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಶ್ರೀ. ಪ್ರಶಾಂತ್ ಅವರು, ಸರ್ಕಾರದ ನಿಯಮಗಳಿಗನುಸಾರ, ಪ್ರಕಾರ ಯಾರಿಗಾದರು ತಮ್ಮ ಹುದ್ದೆಗೆ ಹೆಚ್ಚುವರಿ ಜವಾಬ್ದಾರಿ ನೀಡಿದರೆ ಈಗಿರುವ ವೇತನಕ್ಕೆ ಶೇಕಡ 15% ಹೆಚ್ಚುವರಿ ವೇತನ ನೀಡಬಹುದಾಗಿದೆ. ಸದರಿ ನೌಕರರು, ತಾತ್ಕಾಲಿಕ ಗುತ್ತಿಗೆ ಆಧಾರದ ಮೇರೆಗೆ ಸಂಚಿತ ವೇತನ ಮೊತ್ತ ರೂ.35,000/– (ರೂ.ಮೂವತ್ತೈದು ಸಾವಿರ ಮಾತ್ರ) ಕಾರ್ಯನಿರ್ವಹಿಸುತ್ತಿರುವುದರಿಂದ, ಅಂದಾಜು ರೂ.5000/– ದಿಂದ ರೂ.10,000/– ದ ವರೆಗೆ ಸೂಕ್ತವಾಗಿ ನಿಗದಿಪಡಿಸಬಹುದಾಗಿದೆ ಎಂದು ತಿಳಿಸಿದರು.

ಅದಕ್ಕೆ ಸಭೆಯಲ್ಲಿ ಒಪ್ಪಿಗೆ ಸೂಚಿಸಿ, ಸದರಿ ವಿಷಯದ ಕುರಿತಂತೆ ವಿಶ್ವವಿದ್ಯಾಲಯದ ಕುಲಪತಿಗಳು, ಸೆಪ್ಟೆಂಬರ್–2020 ಮಾಹೆಯಿಂದ ಅನ್ವಯವಾಗುವಂತೆ, ಸೂಕ್ತ ಮೊತ್ತವನ್ನು ಸಂಚಿತ ಆಧಾರದಲ್ಲಿ ನಿಗದಿಪಡಿಸಬೇಕೆಂದು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

ವಿ.ಟಿ.ಯು. ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಇವರು ಮಾತನಾಡಿ, ಸದರಿಯವರಿಗೆ ಹೆಚ್ಚುವರಿ ಜವಾಬ್ದಾರಿ ಹಿಂದಿನಿಂದ ನೀಡಿದರೂ, ಅವರಿಗೆ ಪ್ರಭಾರ ಭತ್ಯೆಯನ್ನು ಮುಂಬರುವ ದಿನಗಳಿಂದ ಕೊಡಬಹುದು, ನಿಯಮದ ಪ್ರಕಾರ ಪೂರ್ವಾನ್ವಯವಾಗುವಂತೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದರು.

ಮೇಲ್ಕಂಡ ಸವಿಸ್ತಾರವಾದ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೫: ವಿಶ್ವವಿದ್ಯಾಲಯದ ಪ್ಯಾನಲ್ ಆಫ್ ಅಡ್ವೋಕೇಟ್ಸ್ ಪಟ್ಟಿಯಲ್ಲಿ ಶ್ರೀ ಅನೂಪ ದೇಶಪಾಂಡೆ, ವಕೀಲರು ಇವರನ್ನು ಸೇರ್ಪಡೆ ಮಾಡುವ ಕುರಿತು.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, ೨೦೧೬ರನ್ವಯ ಸ್ಥಾಪಿಸಲಾಗಿದೆ. ವಿಶ್ವವಿದ್ಯಾಲಯ ೨೦೧೭-೧೮ ಶೈಕ್ಷಣಿಕ ಸಾಲಿನಿಂದ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆ ನೀಡಲು ಮತ್ತು ಇತರರೊಡನೆ ಸಂಭವಿಸುವ ವಿವಾದಗಳು, ಒಪ್ಪಂದಗಳು ಮುಂತಾದವುಗಳ ಬಗ್ಗೆ ಸಲಹೆ ನೀಡಲು ನುರಿತ ವಕೀಲರ ಅಗತ್ಯವಿದೆ.

ವಿಶ್ವವಿದ್ಯಾಲಯದ ಪ್ಯಾನಲ್ ಆಫ್ ಅಡ್ವೋಕೇಟ್ಸ್‌ನಲ್ಲಿ ಈಗಾಗಲೇ ಹಲವು ವಕೀಲರನ್ನು ಸೇರ್ಪಡೆಗೊಳಿಸಲಾಗಿದೆ. ಮುಂದುವರೆದು ವಿಶ್ವವಿದ್ಯಾಲಯದ ಪ್ಯಾನಲ್ ಆಫ್ ಅಡ್ವೋಕೇಟ್ಸ್ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸುವಂತೆ ಕೋರಿ ಶ್ರೀ ಅನೂಪ ದೇಶಪಾಂಡೆ, ವಕೀಲರು ಇವರು ದಿನಾಂಕ ೧೫-೦೬-೨೦೨೦ ರಂದು ತಮ್ಮ ಬಯೋಡೆಟಾದೊಂದಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಶ್ರೀ ಅನೂಪ ದೇಶಪಾಂಡೆ, ವಕೀಲರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಕರ್ನಾಟಕ ಹಾಗೂ ಭಾರತ ಸರ್ಕಾರದ ಇನ್ನಿತರ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ಯಾನಲ್ ಆಫ್ ಅಡ್ವೋಕೆಟ್ ಇರುತ್ತಾರೆ. ಸದರಿಯವರು ಅರ್ಹತೆ ಹೊಂದಿದ ವೃತ್ತಿಪರ ಕಾನೂನು ತಜ್ಞರಾಗಿದ್ದಾರೆ.  ಇವರು ಸಿವಿಲ್, ಸಾಂವಿಧಾನಿಕ ಕಾನೂನು, ಗ್ರಾಹಕರ ರಕ್ಷಣೆ, ಅಪರಾಧ ಕಾನೂನು, ಆಸ್ತಿಗಳ ಕಾನೂನು ಮುಂತಾದವುಗಳ ಬಗ್ಗೆ ತಜ್ಞರಾಗಿದ್ದು ೧೯೯೯ ರಿಂದ ಧಾರವಾಡದಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಮೇಲಿನ ವಿಷಯಗಳಲ್ಲಿ ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ, ಗ್ರಾಹಕರ ನ್ಯಾಯಾಲಯ ಮತ್ತು ಟ್ರಿಬ್ಯೂನಲ್‌ಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಕರ್ನಾಟಕ ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಲ್ಪಟ್ಟಿದ್ದಾರೆ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕೇಂದ್ರ ಸರ್ಕಾರದ ಪರವಾಗಿ ವಕೀಲರಾಗಿರುತ್ತಾರೆ.

ವಿಶ್ವವಿದ್ಯಾಲಯ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯನ್ನು ನಿರೀಕ್ಷಿಸಿ ೧೬-೦೬-೨೦೨೦ ರಂದು ಅಧಿಸೂಚನೆ ಸಂಖ್ಯೆ RDPRU ೪೯ GEN ೨೦೧೭/೭೫/೧ ರನ್ವಯ ಶ್ರೀ ಅನೂಪ ದೇಶಪಾಂಡೆ ಅವರನ್ನು ವಿಶ್ವವಿದ್ಯಾಲಯದ ಪ್ಯಾನಲ್ ಆಫ್ ಅಡ್ವೋಕೆಟ್ಸ್ ಪಟ್ಟಿಯಲ್ಲಿ ಸೇರಿಸಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಗಿದೆ.

**Subject No. 15: To consider inclusion of Sri Anoop Deshpande, Advocate, in the panel of Advocates for the University.**

**Reference note:**

The Karnataka State Rural Development and Panchayat Raj University, Gadag has been established under KSRDPR University Act, 2016. The University has started its activities from academic year 2017-18. It is felt necessary to have an additional legal expert in the panel of advocates to mediate disputes, oversee contract signing or advise on legal matters pertaining to the University.

KSRDPRU already has few Advocates in the list of Panel of Advocates. Sri Anoop Deshpande, Advocate, has sent his bio-data along with a request letter on 15-06-2020 to include his name in the University's list of Panel of Advocates. Sri Anoop Deshpande, Advocate, is empanelled in the list of Panel of advocates in many prestigious Universities like Visvesvaraya Technological University, Belagavi, Karnataka Sanskrit University, Bengaluru, Rani Chennamma University, Belagavi and few other Central and State Institutions. He is a qualified legal professional. He has expertise in Civil, Constitutional Law, Consumer Protection, Criminal Law, Property Laws etc. and practicing since 1999 in Dharwad. He deals with the matters related to his area of expertise before District Court, High Court, Consumer Court, and Tribunal. He was Managing Director in Karnataka State Souharda Federal Co-operative ltd. He is enrolled in Bar Council of Karnataka. He is currently Legal Counsel for Union of India before the High Court of Karnataka.

Considering his experience, Vice-Chancellor has appointed Sri Anoop Deshpande as Panel Advocate of the University vide notification no: RDPRU 49 GEN 2017/75/1 dated 16-06-2020 subject to approval of the Executive Council.

Hence, the matter is placed before the Executive Council for ratification of the action taken.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಪತಿಗಳು ವಿವರಿಸಿದರು. ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಕೆಲವು ಅಡ್ವೋಕೆಟ್‌ಗಳು ಪ್ಯಾನಲ್ ಆಫ್ ಅಡ್ವೋಕೆಟ್‌ನಲ್ಲಿ ಇದ್ದರೂ ವಿಶ್ವವಿದ್ಯಾಲಯದ ವಿಷಯಗಳಲ್ಲಿ ಅನುಭವ ಇರುವ ಅಡ್ವೋಕೆಟ್‌ಗಳು ಕಡಿಮೆ. ಆದ್ದರಿಂದ ಶ್ರೀ ಅನೂಪ ದೇಶಪಾಂಡೆ, ವಕೀಲರು ಅವರನ್ನು ಪ್ಯನಲ್ ಆಫ್ ಅಡ್ವಕೇಟ್ಸ್ ನಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಶ್ರೀ ಅನೂಪ ದೇಶಪಾಂಡೆ, ವಕೀಲರು ವಿ.ಟಿಯು ನ ಪ್ಯಾನಲ್ ಆಫ್ ಅಡ್ವೋಕೆಟ್‌ನಲ್ಲಿ ಇದ್ದಾರೆ. ಅವರು ವಿಶ್ವವಿದ್ಯಾಲಯ ಕಾನೂನು ವಿಷಯಗಳಲ್ಲಿ ಪರಿಣಿತಿವುಳ್ಳವರು ಎಂದು ವಿ.ಟಿ.ಯು. ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಇವರು ಹೇಳಿದರು.

ಸದರಿ ಚರ್ಚೆಯೊಂದಿಗೆ, ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೬: ೨೦೧೯-೨೦ ಸಾಲಿನ ಸ್ನಾತಕೋತ್ತರ ಪದವಿಯ ೪ನೇ ಸೆಮಿಸ್ಟರ್ ಪರೀಕ್ಷಾ ಅಧಿಸೂಚನೆ ಮತ್ತು ಪರೀಕ್ಷಾ ವೇಳಾಪಟ್ಟಿಯನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು, ೨೦೧೯-೨೦ ಸಾಲಿನ ೨ನೇ ಸೆಮಿಸ್ಟರ್ ವಿಧ್ಯಾರ್ಥಿಗಳನ್ನು ತೇರ್ಗಡೆಗೊಳಿಸುವ ಕುರಿತು ಹಾಗೂ ೨೦೨೦-೨೧ ಶೈಕ್ಷಣಿಕ ಸಾಲಿನ ಚಟುವಟಿಕೆಗಳನ್ನು ಪ್ರಾರಂಭಿಸುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:-**

ವಿಶ್ವವಿದ್ಯಾಲಯದಲ್ಲಿ, 2019-20ನೇ ಶೈಕ್ಷಣಿಕ ವರ್ಷದ ಕೊನೆಯ ಸೆಮಿಸ್ಟರ್ ಪರೀಕ್ಷೆಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂಎಚ್‌ಆರ್‌ಡಿ) / ಗೃಹ ಸಚಿವಾಲಯ (ಎಂಎಚ್‌ಎ) / ರಾಜ್ಯ ಸರ್ಕಾರ ಮತ್ತು ಯುಜಿಸಿ ಮಾರ್ಗಸೂಚಿಗಳ ಅನುಸಾರ ನಡೆಸಲು ಕ್ರಮ ಜರುಗಿಸಲಾಗುತ್ತಿದೆ. 2020-21ರ ಶೈಕ್ಷಣಿಕ ವರ್ಷದ ಚಟುವಟಿಕೆಗಳನ್ನು ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕೆ ಕುರಿತಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ (ಪಂ.ರಾಜ್) ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. (ಅನುಬಂಧ 1, 2, 3, 4 ಮತ್ತು 5 ರಲ್ಲಿ ಲಗತ್ತಿಸಲಾಗಿದೆ)

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**Subject No.16: To consider Examination Notification and Examination Schedule for Fourth Semester (PG) 2019-20, Modalities for promoting Second Semester (PG) 2019-20 students, Commencement of activities for the academic year 2020-21.**

**Reference Note:**

The KSRDPR University is taking measures to conduct the examinations for the students of fourth semester during the Academic Year 2019-20, with the scrupulous observation of the guidelines, Standard Operating Procedure (SOP), safety measures prescribed by the Ministry of Human Resource Development (MHRD)/Ministry of Home Affairs (MHA)/State Government and UGC Guidelines. Further, suitable

measures are being taken to commence the Academic Session for the Academic year 2020-21. A letter pertaining to the aforesaid subjects was submitted to the Principal Secretary (PR), RDPR Department, Bengaluru for approval (Copy of the same placed at Annexure1, 2, 3, 4 and 5)

Hence, the matter is placed before the Executive Council for consideration and approval.

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ವಿವರಿಸಿದರು. ಶ್ರೀ ಜಿ.ಬಿ.ಶಿವರಾಜು ಇವರು, ಮಾತನಾಡುತ್ತಾ ವಿ.ಟಿ.ಯು ಮತ್ತು ಆರೋಗ್ಯ ವಿಶ್ವವಿದ್ಯಾಲಯಗಳು ಆಯೋಜಿಸುವ Student Induction Programme ಹಾಗೆ ಕ.ರಾ.ಗ್ರಾ.ಪ.ರಾ ವಿಶ್ವವಿದ್ಯಾಲಯ Student Induction Programme ನ್ನು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತಮವಾಗಿಸಲು ಮತ್ತು ಪರಿಣಾಮಕಾರಿಯಾಗಿ ಆಯೋಜಿಸಲು ವಿನಂತಿಸಿದರು. ಮುಂದುವರಿದು, ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯವು ಹಿಂದಿನ ಸಾಲಿನಲ್ಲಿ ಉತ್ತಮವಾದ Student Induction Programme ಆಯೋಜಿಸಿದೆ ಹಾಗೂ ಮುಂದೆಯೂ ಆಯೋಜಿಸುವುದಾಗಿ ಸಭೆಗೆ ವಿವರಿಸಿದರು.

ವಿ.ಟಿ.ಯು. ನ ಕುಲಪತಿಗಳಾದ ಪ್ರೊ.ಕರಿಸಿದ್ದಪ್ಪ ರವರು ಕೋವಿಡ್ ಸಂದರ್ಭದಲ್ಲಿ ಉತ್ತಮವಾಗಿ ಪರೀಕ್ಷೆಗಳನ್ನು ನಡಿಸಿದಕ್ಕೆ ಶುಭಾಶಯ ಕೋರುತ್ತಾ ಪ್ರಮಾಣಿತ ಕಾರ್ಯಚರಣಾ ವಿಧಾನ (Standard operating Procedure) ಕಳುಹಿಸಿ ಕೊಡಬೇಕೆಂದು ಮಾನ್ಯ ಕುಲಪತಿಗಳು ವಿನಂತಿಸಿದರು.

ವಿ.ಟಿ.ಯು. ನ ಕುಲಪತಿಗಳಾದ ಪ್ರೊ.ಕರಿಸಿದ್ದಪ್ಪ ರವರು ಮಾತನಾಡುತ್ತಾ ವಿ.ಟಿ.ಯು 99% ಕೊನೆಯ ವರ್ಷದ ಪದವಿ ಮತ್ತು ಬ್ಯಾಕ್‌ಲಾಗ್ ಪರೀಕ್ಷೆಗಳನ್ನು ಮುಗಿಸಿರುತ್ತದೆ ಹಾಗೂ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಸುಪ್ರಿಮ ಕೊರ್ಟ ಆದೀಶದಂತೆ ಮಾರ್ಗಸೂಚಿ ರಚಿಸಿ ಪರೀಕ್ಷೆಗಳನ್ನು ನಡೆಸಬೇಕು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪದವಿ ಪರೀಕ್ಷಾ ಮೌಲ್ಯಮಾಪನವನ್ನು 50:50 ಅನುಪಾತದಲ್ಲಿ ನಡೆಸಬೇಕು ಎಂದು ತಿಳಿಸಿದರು. ಮುಂದುವರೆದು, ಎಇಸಿಟಿಯು ನಿರ್ದೇಶದಂತೆ ವಿಶ್ವವಿದ್ಯಾಲಯವು ಮಾನವೀಯ ಮೌಲ್ಯಗಳ (Relevant, Asseable, Ethical,Deliverable and Employable) ಕುರಿತ ವಿಷಯವನ್ನು ರಚಿಸಿ ಪಠ್ಯಕ್ರಮದಲ್ಲಿ ಸೇರಿಸುವದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಉತ್ತೇಜನಕಾರಿಯಾಗಿರುತ್ತದೆ ಎಂದು ಸಭೆಗೆ ವಿವರಿಸಿದರು ಮತ್ತು ಗ್ರಾಮೀಣ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ತಾಂತ್ರೀಕ ವಿಶ್ವವಿದ್ಯಾಲಯ ಹಾಗೂ ಆರೋಗ್ಯ ವಿಶ್ವವಿದ್ಯಾಲಯಗಳು ಒಂದೆ ತರಹದ ಮಾನವೀಯ ಮೌಲ್ಯಗಳ ಪಠ್ಯಕ್ರಮ ರಚಿಸಬೇಕು ಎಂದು ವಿನಂತಿಸಿದರು. ಶ್ರೀ ಪ್ರಕಾಶ್ ಭಟ್ ರವರು ಮಾತನಾಡುತ್ತ, ಸದರಿ ವಿಷಯದ ಕುರಿತು ವಿಶ್ವವಿದ್ಯಾಲಯವು ಇನ್ನು ಹೆಚ್ಚಿನ ಗಮನವಹಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ವಿನಂತಿಸಿದರು.

ಸವಿಸ್ತಾರ ಚರ್ಚೆಯೊಂದಿಗೆ, 2019-20ನೇ ಶೈಕ್ಷಣಿಕ ವರ್ಷದ ಕೊನೆಯ ಸೆಮಿಸ್ಟರ್ ಪರೀಕ್ಷೆಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂಎಚ್‌ಆರ್‌ಡಿ) / ಗೃಹ ಸಚಿವಾಲಯ (ಎಂಎಚ್‌ಎ) / ರಾಜ್ಯ ಸರ್ಕಾರ ಮತ್ತು ಯುಜಿಸಿ ಮಾರ್ಗಸೂಚಿಗಳ ಅನುಸಾರ ಈಗಾಗಲೇ ವಿಶ್ವವಿದ್ಯಾಲಯವು ನಿಗದಿಪಡಿಸಿದ ದಿನಾಂಕಗಳಂದು ನಡೆಸುವ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು

ನಿರ್ಣಯಿಸಿತು. ಅದರ ಜೊತೆಗೆ, 2019-20 ನೇ ಸಾಲಿನ ಎರಡನೇಯ ಸೆಮಿಸ್ಟರ ವಿದ್ಯಾರ್ಥಿಗಳಿಗೆ ತೇರ್ಗಡೆಗೊಳಿಸುವ ಕುರಿತು ಹಾಗೂ 2020-21 ಶೈಕ್ಷಣಿಕ ಸಾಲಿನ ಚಟುವಟಿಕೆಗಳನ್ನು ಪ್ರಾರಂಭಿಸುವ ಕುರಿತಂತೆ ಸದರಿ ಮಾರ್ಗಸೂಚಿಗಳನ್ವಯ ಕ್ರಮ ಜರುಗಿಸಲು ಅನುಮತಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೭: ವಿಶ್ವವಿದ್ಯಾಲಯದ ಜಮೀನಿನಲ್ಲಿ ವಿಸ್ತೀರಣಾ ಚಟುವಟಿಕೆಗಳಾದ ಕೃಷಿ, ತೋಟಗಾರಿಕೆ, ಹಾಗೂ ಸಂಬಂಧಪಟ್ಟ ಇತರೆ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಕುರಿತು.**

- Content Development in Sabarmati Ashram.
- 'DeSSI Project' (Demonstrable, Scalable, Sustainable and Initiatives) for Agriculture and other Agri based activities in University farm land by involving all faculty members, Students and other Stakeholders - ವಿಸ್ತೃತ ಯೋಜನಾ ಅಂದಾಜು ವೆಚ್ಚ ೧೮.೨೫ ಲಕ್ಷ ರೂಗಳು.
- 'Madari Sasya Shishu Palana Kendra (Model Nursery Plant)'- ವಿಸ್ತೃತ ಯೋಜನಾ ವರದಿಯಲ್ಲಿದ್ದಂತೆ ಅಂದಾಜು ವೆಚ್ಚ ೨೭.೯೨ ಲಕ್ಷ ರೂಗಳು.
- Integrated Livestock Farming pilot project - ವಿಸ್ತೃತ ಯೋಜನಾ ವರದಿಯಲ್ಲಿದ್ದಂತೆ ಅಂದಾಜು ವೆಚ್ಚ ೨೫ ಲಕ್ಷ ರೂಗಳು.
- Water Conservation Structure pilot project - ವಿಸ್ತೃತ ಯೋಜನಾ ವರದಿಯಲ್ಲಿದ್ದಂತೆ ಅಂದಾಜು ವೆಚ್ಚ ೨೦ ಲಕ್ಷ ರೂಗಳು.

**ಪರಾಮರ್ಶನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧಿನಿಯಮ, ೨೦೧೬ರನ್ವಯ ಪ್ರಕರಣಗಳ ಸಂಖ್ಯೆ ೪೨, ೪೪, ೪೬, ೫೦, ೫೨ ಮತ್ತು ೫೪ ಗಳಲ್ಲಿ ವಿವರಿಸಿದಂತೆ ಸಮಗ್ರ ಕೃಷಿ ವ್ಯವಸ್ಥೆ ಮಾರ್ಗದ (ಕೃಷಿ – ತೋಟಗಾರಿಕೆ – ವೃಕ್ಷ ಕೃಷಿ – ಪಶುಸಂಗೋಪನೆ) ಮುಖಾಂತರ ವಿವೇಕಯುತ ಪ್ರಾಕೃತಿಕ ಸಂಪನ್ಮೂಲ ನಿರ್ವಹಣಾ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಾಗೂ ಕೃಷಿ ಜಮೀನಿನಲ್ಲಿ ಹಣ್ಣು, ಆಹಾರ ಮತ್ತು ಔಷಧೀಯ ಸುಗಂಧ ಮೂಲಿಕೆಗಳಿಗೆ ಬೇಡಿಕೆಯಿರುವ ಕಾರಣ, ವಿಶ್ವವಿದ್ಯಾಲಯದ ವತಿಯಿಂದ ಕೃಷಿಕರಿಗೆ ಗಿಡಮರಗಳನ್ನು ಬೆಳೆಸಲು ಉತ್ತೇಜಿಸುವುದು ಮತ್ತು ಜೈವಿಕ ವೈವಿಧ್ಯತೆಯನ್ನು ನಿರ್ವಹಿಸುವ ಮುಖಾಂತರ ಕೃಷಿ ಉತ್ಪಾದನೆಯನ್ನು ಉತ್ತಮಗೊಳಿಸಲು ನೀತಿಯನ್ನು ರೂಪಿಸುವುದು ಹಾಗೂ ಆಚರಣೆಗಳನ್ನು ಉತ್ತೇಜಿಸುವುದು ವಿಶ್ವವಿದ್ಯಾಲಯದ ಗುರಿಯಾಗಿರುತ್ತದೆ.

ವಿಶ್ವವಿದ್ಯಾಲಯದ ಗುರಿ, ದೃಷ್ಟಿ ಹಾಗೂ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮೇಲೆ ತಿಳಿಸಿರುವ 'DeSSI Project' ಹಾಗೂ ಮಾದರಿ ಸಸ್ಯ ಶಿಶುಪಾಲನಾಲಯ, ಕಾಮಗಾರಿಗಳಿಗೆ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆದುಕೊಂಡು, ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯನ್ನು ಕಾಯ್ದಿರಿಸಿ, ಕೆಲವು ಹವಾಮಾನ ಆಧಾರಿತ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯನ್ನು ಲಗತ್ತಿಸಿ ಕಾರ್ಯನಿರ್ವಾಹಕ ಪರಿತ್ತಿನ ಪರಿಗಣನೆಗೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಿದೆ.

ಇನ್ನುಳಿದಂತೆ, ಸಾಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡದಲ್ಲಿ ಹಮ್ಮಿಕೊಳ್ಳಬಹುದಾದ ಚಟುವಟಿಕೆ, Integrated Livestock Farming pilot project, Water Conservation Structure pilot project ಗೆ ಸಂಬಂಧಿಸಿದಂತೆ ಕರಡು ಯೋಜನಾ ವರದಿಯನ್ನು ಲಗತ್ತಿಸಿ ಕಾರ್ಯನಿರ್ವಾಹಕ ಪರಿತ್ತಿನ

ಪರಿಗಣನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ. ಯೋಜನೆಯ ರಕ್ಷಣಾ ಗೋಡೆ ಮತ್ತು ತಂತಿಬೇಲಿ ನಿರ್ಮಾಣ ಅಂದಾಜು ವಿಸ್ತೃತ ಯೋಜನಾ ವೆಚ್ಚದಲ್ಲಿ ಒಳಗೊಂಡಿರುವುದಿಲ್ಲಾ.

(ಸದರಿ ವರದಿಗಳನ್ನು ಅನುಬಂಧ ೧,೨,೩,೪ ಮತ್ತು ೫ ರಲ್ಲಿ ಲಗತ್ತಿಸಲಾಗಿದೆ).

**Subject No. 17:** To consider and approve the following activities undertaken for starting of extension activities such as Agriculture, Horticulture related activities in the University land.

- Content Development in Sabarmati Ashram
- 'DeSSI Project' (Demonstrable, Scalable, Sustainable and Initiatives) for Agriculture and other Agri based activities in University farm land by involving all faculty members, Students and other Stakeholders-Estimated Cost Rs 18.25 lakhs
- 'Madari Sasya Shishu Palana Kendra (Model Nursery Plant)' - Estimated Cost as per Detailed Project Repport Rs 27.92 lakhs
- Integrated Livestock Farming pilot project-Estimated Cost as per Detailed Project Repport Rs 25 lakhs
- Water Conservation Structure pilot project-Estimated Cost as per Detailed Project Repport Rs 20 lakhs

**Reference Note:**

As provided in Sections 42, 44, 46, 50, 52 and 54 of the KSRDPR University Act, 2016, the objectives and functions of the University include, Evolving policies and promoting practices to improve agriculture productivity through judicious natural resource management, technology adoption and to generate higher income through integrated farming system approach (Agri-horti-silvi-Livestock) and to promote medicinal and aromatic plantation and useful trees in terms of fruits and timber and maintain bio-diversity.

Therefore, in order to meaningfully implement the Vision, Mission and Objectives of the University, few activities which were climate dependent, were taken to set up aforesaid 'DeSSI Project' and 'Model Nursery Plant' with the approval of Finance Committee and pending approval of Executive Council. The related detailed Project Reports are enclosed for the kind consideration and ratification of the Executive Council

Further, activities to be undertaken in the replica of Sabarmati Ashram, the draft Project Reports of Integrated Livestock Farming pilot project, Water Conservation Structure pilot project are placed before the Executive Council for kind consideration and approval. The cost of construction Boundary wall and fencing for University owned land is

excluded from extension Project's estimated cost. (Respective Annexures are enclosed at 1,2,3,4 and 5).

**ನಿರ್ಣಯ**

ಸದರಿ ವಿಷಯದ ಕುರಿತು ಕುಲಸಚಿವರು ಸಭೆಗೆ ವಿಷಯ ಮಂಡನೆ ಮಾಡಿದರು. ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಜಮೀನಿನಲ್ಲಿ ಕೈಗೊಳ್ಳುತ್ತಿರುವ ವಿಸ್ತೀರಣಾ ಚಟುವಟಿಕೆಗಳಾದ Content Development in Sabarmati Ashram, DeSSI Project, Madari Sasya Shishu Palana Kendra (Model Nursery Plant), Integrated Livestock Farming pilot project, Water Conservation Structure pilot project ಬಗ್ಗೆ ವಿವರಿಸಿದರು.

ಶ್ರೀ. ಬಿ.ಜಿ.ಗೋವಿಂದಪ್ಪ ರವರು ವಿಶ್ವವಿದ್ಯಾಲಯವು ನೀರು ಸಂರಕ್ಷಣೆಗೆ ಚೆಕ್ಕ ಡ್ಯಾಮ ನಿರ್ಮಾಣ ಮತ್ತು water recharge ಕುರಿತು ಹೆಚ್ಚು ಯೋಜನೆ ಕೈಗೂಳ್ಳುಲು ಮನವಿ ಮಾಡಿದರು.

ಮುಂದುವರೆದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ರಾಜೇಂದ್ರ ಪ್ರಸಾದರವರು ಮಾತನಾಡುತ್ತಾ ವಿಶ್ವವಿದ್ಯಾಲಯವು LandScaping, Integrated Livestock Farming ಮತ್ತು ಇನ್ನಿತರೆ ಕೃಷಿಗೆ ಸಂಬಂದಿಸಿದ ವಿಷಯಕ್ಕೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಎಲ್ಲ ರೀತಿಯ ತಾಂತ್ರೀಕ ಸಹಾಯ ನೀಡಲು ಸಿದ್ಧವಿರುವುದಾಗಿ ತಿಳಿಸಿದರು.

ವಿ.ಟಿ.ಯು. ನ ಕುಲಪತಿಗಳಾದ ಪ್ರೊ.ಕರಿಸಿದ್ದಪ್ಪ ರವರು ಮಾತನಾಡುತ್ತಾ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ(ಕೆಎಸ್‌ಸಿಎಸ್‌ಟಿ) ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡಿತ್ತಿದ್ದು ಆ ಸಂಸ್ಥೆಯ ಸಹಾಯವನ್ನು ವಿಶ್ವವಿದ್ಯಾಲಯದ ವಿಸ್ತೀರಣಾ ಚಟುವಟಿಕೆಗಲ್ಲಿ ಉಪಯೋಗಿಸಲು ಸಲಹೆ ನೀಡಿದರು.

ಶ್ರೀ. ಜಿ.ಬಿ.ಶಿವರಾಜು ರವರು ಸದರಿ ವಿಷಯ ಕುರಿತು ವಿಶ್ವವಿದ್ಯಾಲಯವು ಔಷದಿ ಸಸ್ಯಗಳನ್ನು ವಿಸ್ತೀರಣಾ ಚಟುವಟಿಕೆಗಳ ಜಮೀನಿನಲ್ಲಿ ಬೆಳಸಬೇಕು ಎಂದು ಸಲಹೆ ನೀಡಿದರು. ಮುಂದುವರೆದು, ವಿಶ್ವವಿದ್ಯಾಲಯವು ಕರ್ನಾಟಕ ಶಿಲ್ಪಕಲಾ ಪರಿಷತ್ತಿನ ಸಹಾಯ ಪಡೆದು ಗಾಂಧೀಜಿ ತತ್ವಗಳನ್ನು ಈಗೀನ ಯುವ ಸಮುದಾಯಕ್ಕೆ ಅರ್ಥವಗುವಂತೆ ಸಾಬರಮತಿ ಆಶ್ರಮದಲ್ಲಿ ಪರಿಸರ ನಿರ್ಮಿಸಬೇಕು ಮತ್ತು ನಿಗದಿ ಪಡಿಸಿದ ಅವಧಿಯಲ್ಲಿಯೇ ಸಾಬರಮತಿ ಆಶ್ರಮದ ಕಟ್ಟಡ ಪೂರ್ಣಗೋಳಿಸಬೇಕು ಎಂದು ಕೋರಿದರು. ಮಾನ್ಯ ಕುಲಪತಿಗಳು ಈ ಕುರಿತು ಸಾಬರಮತಿ ಆಶ್ರಮದ ಕಟ್ಟಡ ಪೂರ್ಣಗೋಳಿಸುಲು ಆದ್ಯತೆ ನೀಡಲಾಗುವುದು ಎಂದು ಸಭೆಗೆ ವಿವರಿಸಿದರು.

ಶ್ರೀ ಪ್ರಕಾಶ ಭಟ್ಟ ಮಾತನಾಡುತ್ತಾ, ವಿಶ್ವವಿದ್ಯಾಲಯವು Integrated Livestock Farming pilot project ಕುರಿತಾಗಿ ಮಣ್ಣು ಮತ್ತು ನೀರು ಸಂರಕ್ಷಣೆ ಹಾಗೂ ವರ್ಮಿಕಾಂಪೋಸ್ಟ್ ತಯಾರಿಸಲು ಶ್ರೀ. ಆಬ್ದುಲ ಅಜೀಜ, ಡಾ.ಎಸ್.ಎಸ್.ಹಿರೇಮಠ ಮತ್ತು IGFRI ಸಿಬ್ಬಂದಿ ವರ್ಗ ಸೇರಿ ಯೋಜನೆಯ ಅಂದಾಜು ಮೊತ್ತದೊಂದಿಗೆ ಕರಡು ವರದಿ ಸಿದ್ದಪಡಿಸಿರುತ್ತಾರೆ ಮುಂದುವರೆದು ಶ್ರೀ ಪ್ರಕಾಶ ಭಟ್ಟ ರವರು ವಿಶ್ವವಿದ್ಯಾಯವು ಪ್ರಕೃತಿ ಚಿಕಿತ್ಸೆ ಕುರಿತು ಗಮನವಹಿಸಬೇಕೆಂದು ಸೂಚಿಸಿದರು. ಮಾನ್ಯ ಕುಲಪತಿಗಳು ಮುಂದುವರೆಸಿ ವಿಶ್ವವಿದ್ಯಾಲಯವು ಹೊಸ ಪ್ರಕೃತಿ ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಬದಲು ಗದಗ ಶಹರ ಹತ್ತೀರವಿರುವ ಹುಲಕೊಟಿ ಗ್ರಾಮದಲ್ಲಿರುವ ಕೆ.ಎಚ್.ಪಾಟೀಲ ಪ್ರಕೃತಿ ಚಿಕಿತ್ಸಾ ಕೇಂದ್ರ ಜೂತೆಗೆ ಒಡಂಬಡಿಕೆ

ಮಾಡಿಕೊಳ್ಳವುದು ಸೂಕ್ತ ಎಂದು ಸಭೆಗೆ ವಿವರಸಿದರು. ಶ್ರೀ. ಅರುಣ ಪಾಟೀಲ ರವರು ಕೆ.ಎಚ್.ಪಾಟೀಲ ಪ್ರಕೃತಿ ಚಿಕಿತ್ಸಾ ಕೇಂದ್ರ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಸಹಾಯ ಮತ್ತು ಸಹಕಾರ ನೀಡುತ್ತೇನೆ ಎಂದು ಸಭೆಗೆ ವಿವರಸಿದರು.

ಮೇಲ್ಕಂಡ ಚರ್ಚೆಯೊಂದಿಗೆ, ಸದರಿ ವಿಸ್ತೀರಣಾ ಚಟುವಟಿಕೆಗಳ ವಿಷಯವನ್ನು ಈ ಕೆಳಗಿನಂತೆ ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

- Content Development in Sabarmati Ashram:
  ಕುಲಪತಿಗಳ ಅಧ್ಯಕ್ಷತೆಯಲ್ಲಿ ಪರಾಮರ್ಶನ ಟಿಪ್ಪಣಿಯಲ್ಲಿ ನಮೂದಿಸಿದ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯಲ್ಲಿ ಸಾಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡದಲ್ಲಿ ತೆಗೆದುಕೊಳ್ಳಬಹುದಾದ ಚಟುವಟಿಕೆಗಳನ್ನು ಚರ್ಚಿಸಿ ಅನುಮೋದಿಸುವುದು ಹಾಗೂ ಈ ಎಲ್ಲಾ ಕೆಲಸಗಳಿಗೆ ಮಾರ್ಚ 2021 ಮಾಹೆವರೆಗೆ ಅಂದಾಜು ಇಪತ್ತು ಲಕ್ಷಗಳ ಮಿತಿಗೊಳಪಟ್ಟು ಅನುಷ್ಠಾನಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದನೆ ನೀಡಲು ನಿರ್ಣಯಿಸಿತು.

- 'DeSSI Project' (Demonstrable, Scalable, Sustainable and Initiatives) for Agriculture and other Agri based activities in University farm land by involving all faculty members, Students and other Stakeholders –
  ಮಾರ್ಚ 2021 ಮಾಹೆವರೆಗೆ ವಿಸ್ತ್ರತ ಯೋಜನಾ ವರದಿಯಲ್ಲಿನ ಅಂದಾಜು ವೆಚ್ಚ 18.25 ಲಕ್ಷ ರೂಗಳಿಗೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

- 'Madari Sasya Shishu Palana Kendra (Model Nursery Plant)'-
  ಮಾರ್ಚ 2021 ಮಾಹೆವರೆಗೆ ವಿಸ್ತ್ರತ ಯೋಜನಾ ವರದಿಯಲ್ಲಿನ ಅಂದಾಜು ವೆಚ್ಚ ೨೭.೯೨ ಲಕ್ಷ ರೂಗಳಿಗೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

- Integrated Livestock Farming pilot project –
  ಮಾರ್ಚ 2021 ಮಾಹೆವರೆಗೆ ವಿಸ್ತ್ರತ ಯೋಜನಾ ವರದಿಯಲ್ಲಿನ ಅಂದಾಜು ವೆಚ್ಚ ೨೫ ಲಕ್ಷ ರೂಗಳಿಗೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

- Water Conservation Structure pilot project –

  ಮಾರ್ಚ 2021 ಮಾಹೆವರೆಗೆ ವಿಸ್ತ್ರತ ಯೋಜನಾ ವರದಿಯಲ್ಲಿನ ಅಂದಾಜು ವೆಚ್ಚ ೨೦ ಲಕ್ಷ ರೂಗಳಿಗೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

ವಿಷಯ ಸಂಖ್ಯೆ ೧೮: ವಿಶ್ವವಿದ್ಯಾಲಯದಲ್ಲಿ ಸಮಾಲೋಚನಾ ಕೇಂದ್ರ (Counselling Centre) ಪ್ರಾರಂಭಿಸುವ ಬಗ್ಗೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ನಿಮ್ಹಾನ್ಸ್, ಬೆಂಗಳೂರು ಇವರ ಜೊತೆ ಒಡಂಬಡಿಕೆ (MoU) ಮಾಡಿಕೊಳ್ಳುವ ಬಗ್ಗೆ.

**ಪರಾಮರ್ಷನ ಟಿಪ್ಪಣಿ:-**

ಕೊರೋನ ಪಿಡುಗು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದೆ. ಈ ಅನಿರೀಕ್ಷಿತ ಸ್ಫೋಟ ಜನರ ಜೀವನದಲ್ಲಿ ವ್ಯಾಪಕ ಹಾನಿ ಮಾಡಿದೆ. ಈ ಪಿಡುಗು ಜನರ ಆರೋಗ್ಯದಲ್ಲಿ ಮಾತ್ರವಲ್ಲ, ಆರ್ಥಿಕತೆ, ಸಾಮಾಜಿಕ ಚಟುವಟಿಕೆಗಳಲ್ಲಿ ಹಾಗೂ ಮಾನಸಿಕ ಸಮಸ್ಯೆಗಳನ್ನೂ ಉಂಟು ಮಾಡಿದೆ. ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಬಲಶಾಲಿಯಾಗಿರುವವರು ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸುತ್ತಾರೆ. ಆದರೆ, ಬಹುತೇಕರು ಈ ಸಮಸ್ಯೆಯನ್ನು ಎದುರಿಸಲು ದಿನದಿಂದ ದಿನಕ್ಕೆ ಮಾನಸಿಕವಾಗಿ, ಆರ್ಥಿಕವಾಗಿ ಹೋರಾಡುತ್ತಿದ್ದಾರೆ. ಅಂಥವರಿಗೆ ಸರಿಯಾದ ಮಾರ್ಗದರ್ಶನ ಹಾಗೂ ತಜ್ಞರ ಸಹಾಯ ಅವಶ್ಯಕತೆ ಇದೆ.

ಈ ಎಲ್ಲಾ ಕಾರಣಗಳಿಂದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ವಿಶ್ವವಿದ್ಯಾಲಯ ಜನರ ಸಂಕಷ್ಟಕ್ಕೆ ಸ್ಪಂದಿಸಲು ಒಂದು ಸಮಾಲೋಚನಾ ಕೇಂದ್ರ (Counselling Centre) ಸ್ಥಾಪಿಸಲು ಹೊಸ ಕಲ್ಪನೆಯೊಂದಿಗೆ ಮುಂದಾಗಿದೆ. ಈ ಸಮಾಲೋಚನಾ ಕೇಂದ್ರಕ್ಕೆ "ಮನೋಚೇತನ" ಎಂದು ಕರೆಯಲಾಗುವುದು. ಜನರ ಪರಿಸ್ಥಿತಿಯನ್ನು ಅರಿತು ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ವಿಶ್ವವಿದ್ಯಾಲಯದ ಈ ಕೇಂದ್ರದ ಮೂಲ ಉದ್ದೇಶ. ಈ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಎಂ.ಎಸ್.ಡಬ್ಲ್ಯು (ಸಮಾಜ ಕಾರ್ಯ) ವಿಭಾಗದ ಸಮನ್ವಯದಲ್ಲಿರುತ್ತದೆ.

ನಿಮ್ಹಾನ್ಸ್, SOCHARA (Society for Community Health Awareness Research and Action) ಅಂಥ ಪ್ರಮುಖ ಆರೋಗ್ಯ ಸಂಸ್ಥೆಗಳಿಂದ ತರಬೇತಿ ಪಡೆದು ಪರಿಣತಿ ಹೊಂದಿರುವ ಸಲಹೆಗಾರರ ಸೇವೆಯನ್ನು ಸಮಾಲೋಚನಾ ಕೇಂದ್ರಕ್ಕೆ ಪಡೆದುಕೊಳ್ಳಬಹುದಾಗಿದೆ. ಇದಕ್ಕೆ ಕುರಿತಂತೆ ಪ್ರಾಥಮಿಕವಾಗಿ ನಿಮ್ಹಾನ್ಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬಹುದಾಗಿದೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ. (ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ)

**Subject No. 18: To consider and approve Counselling Centre in the University and entering into Memorandum of Understanding (MoU) with NIMHANS, Bengaluru for the same.**

**Reference Note:**

The Covid-19 has made impact on all spheres of life. This unexpected outbreak has created havoc in human life. Its impact is not only on health but it has affected economy, social activities and psychological aspects also. Those who are emotionally strong and have well-built support system are facing the situation effectively. But majority of the people are under stress, aimless and struggling to lead

day-to-day life. They need proper guidance and professional help to face this situation effectively.

Considering all these aspects Karnataka State Rural Development and Panchayat Raj University, Gadag has come up with an innovative idea of providing counselling services to these people to face these kind of situations effectively. A Counselling Centre needs to be established in the University in this regard. This Counselling centre will be called as **"Manochethana"**. This service will be co-ordinated by the MSW programme in the University.

The services of professionals trained in organisations like NIMHANS, Bengaluru, SOCHARA (Society for Community Health Awareness Research and Action) may be availed. Thus, to begin with an MoU with NIMHANS may be signed for this purpose.

Thus, the proposal is placed before the Executive Council for consideration and approval. (Related copies placed at Annexure 1).

**ನಿರ್ಣಯ**

ಮಾನ್ಯ ಕುಲಪತಿಗಳು ವಿಷಯದ ಕುರಿತು ಸಭೆಗೆ ವಿವರಿಸುತ್ತಾ, ವಿಶ್ವವಿದ್ಯಾಲಯವು ನಿಮ್ಹಾನ್ಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಪತ್ರ ಬರೆಯಲಾಗಿದೆ ಮತ್ತು ಪ್ರೋ. ಗಾಂಧಿ ದಾಸ್ ರವರನ್ನು ಸಲಹೆಗಾರರಾಗಿ ನೇಮಿಸಿಕೊಳ್ಳಲು ಅನುಮತಿ ನೀಡಿದರೆ, ಮುಂದುವರಿಯಬಹುದಾಗಿದೆ ಎಂದು ಸಭೆಗೆ ವಿವರಿಸಿದರು. ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೧೯: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ, ಬೆಂಗಳೂರು ಜೊತೆ ಒಡಂಬಡಿಕೆ(MoU) ಮಾಡಿಕೊಳ್ಳುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:**

ಸುಸ್ಥಿರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ವಿಷಯಗಳಲ್ಲಿ ಬೋಧನೆ, ತರಬೇತಿ ಮತ್ತು ಸಂಶೋಧನೆಗಾಗಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಸಮಗ್ರ ಗ್ರಾಮೀಣಾಭಿವೃದ್ಧಿಯ ಅಧ್ಯಯನ ಮತ್ತು ಸಂಶೋಧನೆಗೆ ಒತ್ತು ನೀಡುವುದು.

ಬೆಂಗಳೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಭಾರತ ಸರಕಾರದ ನವ್ಯ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ನೆರವಿನೊಂದಿಗೆ, ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ 2000ನೇ ಸಾಲಿನಲ್ಲಿ

ಸ್ಥಾಪಿತವಾಗಿದೆ. ಇದರ ಮುಖ್ಯ ಉದ್ದೇಶ, ಕರ್ನಾಟಕ ಮತ್ತು ನೆರೆಯ ದಕ್ಷಿಣ ರಾಜ್ಯಗಳಾದ ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪಾಂಡಿಚೆರಿಗಳ ಅಗತ್ಯಗಳಿಗೆ ಗ್ರಾಮೀಣ ಇಂದನ ಮತ್ತು ಸುಸ್ಥಿರ ಗ್ರಾಮೀಣಾಭಿವೃದ್ಧಿ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಹಾಗೂ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆ ಮತ್ತು ತರಬೇತಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಶೈಕ್ಷಣಿಕ ಪರಿಷತ್ತಿನ ಅನುಮೋದನೆಯನ್ನು ಕಾಯ್ದಿರಿಸಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯೊಡನೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದೆ.

**ಸಹಯೋಗದ ಕ್ಷೇತ್ರಗಳು:**

1. ವಿಶ್ವವಿದ್ಯಾಲಯಕ್ಕೆ ಸಂಶೋಧನಾ ಒಳಹರಿವುಗಳನ್ನು ಒದಗಿಸುವುದು;
2. ಅಗತ್ಯಗಳ ವಿಶ್ಲೇಷಣೆಯನ್ನು ಆಧರಿಸಿ ಹೊಸ ಕಾರ್ಯಕ್ರಮಗಳನ್ನು ಗುರುತಿಸುವುದು;
3. ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಡಿಪ್ಲೊಮ, ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸುವುದು.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ. (ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ).

**Sub. No 19: To consider entering into Memorandum of Understanding (MoU) between KSRDPR University, Gadag and Mahatma Gandhi Institute of Rural Energy and Development(MGIRED), Bangalore – reg.**

**Reference note:**

The Karnataka State Rural Development and Panchayat Raj University Gadag (KSRDPRU), has been established for Teaching, Training and Research on sustainable Rural Development and Panchayat Raj Institutions. The main objective of the University is to strengthen local self-governance system and to give impetus for study and research for comprehensive rural development in the state of Karnataka.

Mahatma Gandhi Institute of Rural Energy and Development (MGIRED) located in Bengaluru were established in the year 2000 with the assistance of Ministry of New and Renewable Energy (MNRE), Government of India and the Rural Development & Panchayat Raj Dept., Government of Karnataka. The main objective is to have a unique Institution to carry out Capacity Building

and Awareness Programmes in the areas of Rural Energy and Sustainable Rural Development which will cater to the needs of Karnataka and neighbouring southern states namely Andhra Pradesh, Telangana, Tamil Nadu, Kerala and Union Territory Pondicherry.

In order to implement the objectives of the University more effectively and in the development of academics, research and training activities in the University, it is proposed to enter into a MoU between the University and MGIRED for collaboration, pending approval of Academic Council.

**Areas of collaboration:**

1. Providing research inputs to KSRDPRU.
2. To identify new programs that can be introduced based on need analysis.
3. Starting of diploma and certificate courses in association with MGIRED.

The proposal is placed before the Executive Council for consideration and approval. (Related copies placed at Annexure 1).

**ನಿರ್ಣಯ**

ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಪ್ರಸ್ತಾಪಿಸಿದರು. ಇದರ ಜೊತೆಗೆ ವಿಶ್ವವಿದ್ಯಾಲಯವು ಪ್ರಸ್ತುತ ಸಾಲಿನಲ್ಲಿ ಪ್ರಾರಂಭ ಮಾಡಲು ಉದ್ದೇಶಿಸಲಾಗಿರುವ, ನವೀಕರಿಸಬಹುದಾದ ಇಂಧನ (P.G. Diploma in Renewable Energy) ಕಾರ್ಯಕ್ರಮದಲ್ಲಿ ಪಿ.ಜಿ. ಡಿಪ್ಲೋಮಾ ತರಗತಿಗಳನ್ನು ಹಾಗೂ ಪ್ರಯೋಗಾಲಯಗಳನ್ನು, ಬೆಂಗಳೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ನಡೆಸಲು ಯೋಜನೆ ರೂಪಿಸಿರುವುದರಿಂದ, ಅನುಕೂಲವಾಗಲಿದೆ, ಎಂಬುದನ್ನೂ ಸಹ ಸಭೆಗೆ ಗಮನಕ್ಕೆ ತಂದರು.

ಮೇಲಿನ ಅಂಶಗಳನ್ನು ಪರಿಗಣಿಸಿ ಸದರಿ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೨೦: ಗದಗ ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಗಳಲ್ಲಿ (ಸಿಡಿಡಿಪಿ) ವಿಶ್ವವಿದ್ಯಾಲಯದ ಬೋಧಕವರ್ಗ ಭಾಗವಹಿಸುವಿಕೆಯನ್ನು ಪರಿಗಣಿಸಲು ಮತ್ತು ಅನುಮೋದಿಸಲು.**

**ಪರಾಮರ್ಶನ ಟಿಪ್ಪಣಿ:-**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, **1993** ರ ಪ್ರಕಾರ, ಜಿಲ್ಲಾ ಯೋಜನೆ ಸೇರಿದಂತೆ ವಿಕೇಂದ್ರೀಕೃತ ಯೋಜನೆಗಳನ್ನು ಕಾಯಿದೆಯ ಸೆಕ್ಷನ್ **309** ಮತ್ತು **310** ರ ಪ್ರಕಾರ ಸಿದ್ಧಪಡಿಸಬೇಕು. ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು (ಸಿಡಿಡಿಪಿ) ತಯಾರಿಸಲು ಜಿಲ್ಲಾ ಯೋಜನಾ

ಸಮಿತಿಗಳಿಗೆ ಮಾರ್ಗಸೂಚಿಗಳನ್ನು ನೀಡುವಂತೆ ಭಾರತ ಸರ್ಕಾರ ಪಂಚಾಯತ್ ರಾಜ್ ಸಚಿವಾಲಯ ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು.

ರಾಜ್ಯ ಪಂಚಾಯತ್ ರಾಜ್ ಕಾಯ್ದೆಯ ನಿಬಂಧನೆಗಳ ಬೆಳಕಿನಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ **1993** ರ ಸೆಕ್ಷನ್ **309** ಮತ್ತು **310** ರ ನಿಬಂಧನೆಗಳ ಪ್ರಕಾರ ಗದಗ ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕ ಆಧಾರದ ಮೇಲೆ ಸಿದ್ಧಪಡಿಸಲು ಉದ್ದೇಶಿಸಲಾಗಿದೆ. ಜಿಲ್ಲಾ ಮಟ್ಟದ ಕೋರ್ ಸಮಿತಿಗಳು ಮತ್ತು ಕಾರ್ಯ ಗುಂಪುಗಳನ್ನು ರಚಿಸುವುದು.

ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತಂದಿರುವ ಕಾರ್ಯಗಳು ಮತ್ತು ಬೋಧಕವರ್ಗದ ಪರಿಣತಿಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧ್ಯಾಪಕರನ್ನು ಜಿಲ್ಲಾ ಕೋರ್ ಸಮಿತಿ ಮತ್ತು ಕಾರ್ಯನಿರತ ಗುಂಪುಗಳ ಭಾಗವಾಗಲು ಆಹ್ವಾನಿಸಲಾಗಿದೆ. (ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ)

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ.

**Subject No. 20: To Consider and approve participation of University faculty in the Comprehensive District Development Plans (CDDP) of Gadag District.**

**Reference Note:**

The Karnataka Gram Swaraj and Panchayat Raj Act, 1993 mandates that the Decentralized Plans including the District Plan shall be prepared as per the provisions of Sections 309 and 310 of the Act. Ministry of Panchayat Raj, Government of India had also advised State Governments to issue guidelines to the District Planning Committees for preparing Comprehensive District Development Plans (CDDPs).

In the light of the provisions of the State Panchayat Raj Act, it is proposed to prepare the Comprehensive District Development Plan of Gadag District on a pilot basis as per the provisions of Sections 309 and 310 of Karnataka Gram Swaraj and Panchayat Raj Act, 1993 by constituting District Level Core Committees and Working Groups.

Considering the programmes implemented in the University and faculties expertise, faculties of KSRDPRU are invited to be the part of District Core committee and working groups. (Related copies placed at Annexure 1)

The matter is placed before the Executive Council for consideration and approval.

**ನಿರ್ಣಯ**

ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಪ್ರಸ್ತಾಪಿಸಿದರು. ಇದು ಮತ್ತೃಇಲಾಖೆಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಹುಮುಖ್ಯ ಕಾರ್ಯಕ್ರಮವಾಗಿದ್ದು, ಒಂದು ವಿನೂತನ ಪ್ರಕ್ರಿಯೆಯಾಗಿದೆ ಎಂದು ತಿಳಿಸಿದರು. ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೨೧: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಾರಂಭಿಸಲ್ಪಟ್ಟ ಕರ್ನಾಟಕದ ಕೋವಿಡ್–19 ಕುರಿತ ಅಧ್ಯಯನದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಪಾಲ್ಗೊಳ್ಳುವಿಕೆ ಕುರಿತು.**

**ಪರಾಮರ್ಶನ ಟಿಪ್ಪಣಿ:–**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಶ್ವ ಬ್ಯಾಂಕ್ ಮತ್ತು ಇತರ ಸಂಶೋಧನಾ ಸಂಸ್ಥೆಗಳ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಕೋವಿಡ್–19 ಕುರಿತು ಸಂಶೋಧನೆ ನಡೆಸುತ್ತಿದೆ. ಈ ಸಂಶೋಧನೆಯು ಉಭಯ ಉದ್ದೇಶಗಳನ್ನು ಹೊಂದಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ತನ್ನ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಬಗ್ಗೆ ಪ್ರತಿಕ್ರಿಯೆಯನ್ನು ನೀಡುವುದು ಮೊದಲನೆಯದು. ಎರಡನೆಯದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಈವರೆಗೆ ಮತ್ತು ಭವಿಷ್ಯದಲ್ಲಿ ಕೋವಿಡ್ ಪ್ರತಿಕ್ರಿಯೆಯನ್ನು ಹೇಗೆ ನಿರ್ವಹಿಸಿದೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದು. ಈ ಅಧ್ಯಯನವು ದತ್ತಾಂಶದ ವಿಶ್ಲೇಷಣೆಯನ್ನು ಅಸ್ತಿತ್ವದಲ್ಲಿರುವ ದತ್ತಾಂಶ ಮೂಲಗಳಿಂದ ಅಥವಾ ಫೋನ್ ಸಂದರ್ಶನಗಳ ಮೂಲಕ ಸಂಗ್ರಹಿಸುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಈ ಸಂಶೋಧನೆಯ ಭಾಗವಾಗಲು ಅವಕಾಶ ಕಲ್ಪಿಸಲಾಗಿದೆ. ಕ್ಷೇತ್ರ ತನಿಖಾಧಿಕಾರಿಗಳಾಗಿ ಈ ಅಧ್ಯಯನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಿವರಗಳನ್ನು ಇಲಾಖೆಗೆ ಸಲ್ಲಿಸಲಾಗುತ್ತದೆ. (ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ)

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ.

**Subject No. 21: To Consider Involvement of KSRDPR University in the study of Covid-19 in Karnataka, initiated by RDPR Department, Govt. of Karnataka.**

**Reference Note:**

The Rural Development and Panchayat Raj Department, Govt. of Karnataka in collaboration with the World Bank and other Research Institutions, is conducting a research on Covid-19 in Karnataka. This research has dual purposes. The first,to provide feedback to RDPR on its rural Covid-19 response. The second is to better understand how RDPR has managed the Covid-19 response till now, and in the future. This study proposes the analysis of data, either from existing data sources, or collected via phone interviews.

The KSRDPRU faculties and students are provided with an opportunity to be part of this research. Details of the students who are participating in this study as field investigators will be submitted to the department. (Related copies placed at Annexure 1)

Hence, the proposal is placed before the Executive Council for consideration and approval.

**ನಿರ್ಣಯ**

ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಪ್ರಸ್ತಾಪಿಸಿದರು ಮತ್ತು ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೨೨: ಎಂಜಿಎನ್‌ಆರ್‌ಇಜಿ ಯೋಜನೆಯ ಪ್ರಭಾವ ಮೌಲ್ಯಮಾಪನದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ತೊಡಗಿಸುವುದು.**

**ಪರಾಮರ್ಶನ ಟಿಪ್ಪಣಿ:–**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಎಂಜಿಎನ್‌ಆರ್‌ಇಜಿಎಸ್) ಆರ್‌ಡಿಪಿಆರ್ ಇಲಾಖೆ ಕಳೆದ ೧೩ವರ್ಷಗಳಿಂದ ಜಾರಿಗೆ ತಂದಿದೆ. ಕೃಷಿ ಕಾರ್ಮಿಕರು, ಭೂಹೀನ, ದುರ್ಬಲ ವಿಭಾಗಗಳು, ಮೂಲ ಸೌಕರ್ಯಗಳು, ನೀರಿನ ಸಂರಕ್ಷಣೆ, ಅರಣ್ಯ, ನೀರಾವರಿ ಸೌಲಭ್ಯಗಳು, ಪಶುಸಂಗೋಪನೆ ಇತ್ಯಾದಿಗಳ ಮೇಲೆ ಈ ಯೋಜನೆಯ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಮತ್ತು ಯೋಜನೆಯಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತರಲು, ಕೆಎಸ್‌ಆರ್‌ಡಿಪಿಆರ್‌ಯು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸಲು ಇಲಾಖೆ ಯೋಜಿಸುತ್ತಿದೆ ಅವರ ಇಂಟರ್ನ್‌ಶಿಪ್ ಕಾರ್ಯಕ್ರಮದ ಭಾಗವಾಗಿ ಈ ಯೋಜನೆಯ ಪ್ರಭಾವವನ್ನು ಅಧ್ಯಯನ ಮಾಡಲು ತಿಳಿಸಲಾಗಿರುತ್ತದೆ.(ಸಂಬಂಧಪಟ್ಟ ಪ್ರತಿಗಳನ್ನು ಅನುಬಂಧ ೧,೨, ೩ ಮತ್ತು ೪ ರಲ್ಲಿ ಲಗತ್ತಿಸಿದೆ)

ಆದುದರಿಂದ ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Subject No. 22: Involving KSRDPR University Students in the Impact assessment of MGNREG Scheme.**

**Reference Note:**

Mahatma Gandhi National Rural Employment Guarantee Scheme (MGNREGS) has been implemented by the RDPR department, Govt. of Karnataka since last 13 years. To understand impact of this scheme on agricultural labours, landless, vulnerable sections, basic amenities, water conservation, forestation, irrigation facilities, animal husbandry, etc. and to bring qualitative changes in the scheme, department is planning to provide an opportunity to the KSRDPRU students to study the impact of this scheme as part of their internship Programme.(Related copies placed at Annexures 1,2,3 and 4)

Hence, the proposal is placed before the Executive Council for consideration and approval.

**ನಿರ್ಣಯ**

ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಪ್ರಸ್ತಾಪಿಸಿದರು ಮತ್ತು ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸಂಖ್ಯೆ ೨೩: ಅಧ್ಯಕ್ಷರ ಅನುಮತಿಯೊಂದಿಗೆ ಬೇರೆ ಯಾವುದೇ ವಿಷಯ.**

**Subject No. 23: Any other matters with the permission of Chairperson.**

**ಟೆಬಲ್ ಅಜೆಂಡಾ ಸಂಖ್ಯೆ 1: ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ವಿವಿಧ ರೀತಿಯ ಪ್ರಾಯೋಗಿಕ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ ನಿರ್ಮಾಣ ಹಾಗೂ ಇನ್ನಿತರ ಚಟುವಟಿಕೆಗಳ ಖರ್ಚು ವೆಚ್ಚಕ್ಕಾಗಿ ತಾತ್ಕಾಲಿಕವಾಗಿ ಖಾಯಂ ಮುಂಗಡ ಹಣ ಹೊಂದುವ ಕುರಿತು.**

**ಪರಾಮರ್ಶನ ಟಿಪ್ಪಣಿ**

ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾದ ಅಂದಾಜು 353 ಎಕರೆ ಜಮೀನಿನಲ್ಲಿ, ಅಂದಾಜು 280 ಎಕರೆ ಬಳಕೆಗೆ ಲಭ್ಯವಿರುತ್ತದೆ. ಸದರಿ ನಾಗಾವಿ ಗ್ರಾಮದ ಸರ್ವೆ ನಂ:149ರಲ್ಲಿ ಅಂದಾಜು 1 ಎಕರೆ 25 ಗುಂಟೆ ಕೃಷಿಗೆ ಅತ್ಯಂತ ಯೋಗ್ಯವಾಗಿದ್ದು, ಅಲ್ಲಿ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ(ಕಟಚಿಟಿಣ ಓಣಾಢಿಜಡಿಥಿ), ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಾಗಾವಿ ಗ್ರಾಮದ ಸರ್ವೇ ನಂ: 144 ರಲ್ಲಿ ಲಭ್ಯ ವಿರುವ ಅಂದಾಜು 5 ಎಕರೆ 12 ಗುಂಟೆ ಜಮೀನಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ 20 ಗುಂಟೆಗಳಷ್ಟು ಸಮನಾಗಿ ಭೂಮಿಯನ್ನು ಹಂಚಿಕೆ ಮಾಡಿ, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಕೃಷಿ ಹಾಗೂ ಸಂಬಂಧಪಟ್ಟ ಚಟುವಟಿಕೆಗಳನ್ನು ಕೈಗೊಳ್ಳಲು, ವಿವಿಧ ಶೈಕ್ಷಣಿಕ, ತರಬೇತಿ

ಮತ್ತು ಸಂಶೋಧನಾ ಕಾರ್ಯಚಟುವಟಿಕೆಗಳನ್ನು (ವಿವಿಧ ಗಿಡಮೂಲಿಕೆ, ಹೂವು, ಹಣ್ಣು, ಅಲಂಕಾರಿಕ ಗಿಡಗಳು ಇತ್ಯಾದಿ) ಹಮ್ಮಿಕೊಳ್ಳಲು ಅನುವು ಮಾಡಿಕೊಡಲು ಮೀಸಲಿಡಲಾಗಿರುತ್ತದೆ.

ಮುಂದುವರೆದು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ಈಗಾಗಲೇ ವಿವಿಧ ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇದರ ಜೊತೆಗೆ ಸದರಿ ನೂತನ ಕ್ಯಾಂಪಸ್ ಪ್ರದೇಶದ ಜಮೀನಿನಲ್ಲಿ ವಿವಿಧ ರೀತಿಯ ಪ್ರಾಯೋಗಿಕ ಚಟುವಟಿಕೆಗಳು, ಜಮೀನಿನ ಸರ್ವೆ ಕಾರ್ಯ, ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ ನಿರ್ಮಾಣ ಹಾಗೂ ಇನ್ನಿತರ ಚಟುವಟಿಕೆಗಳ ಖರ್ಚು ವೆಚ್ಚಕ್ಕಾಗಿ ನಗದು ರೂಪದ ಹಣ ಅವಶ್ಯವಿರುತ್ತದೆ. ಈ ಕಾರಣಕ್ಕಾಗಿ ವಿಶ್ವವಿದ್ಯಾಲಯದ ಎಸ್ಟೇಟ್ ವಿಭಾಗದ ದೈನಂದಿನ ಖರ್ಚುಗಳ ನಿರ್ವಹಣೆಗಾಗಿ ಈಗಾಗಲೇ ಎಸ್ಟೇಟ್ ಅಧಿಕಾರಿಗಳಿಗೆ ರೂ. 15,000/– ಖಾಯಂ ಮುಂಗಡ ಹಣ ಹೊಂದಲು ಅನುಮೋದಿಸಲಾಗಿರುತ್ತದೆ. ಎಸ್ಟೇಟ್ ಅಧಿಕಾರಿಗಳಿಗೆ ನೀಡಿರುವ ಮೊತ್ತವು ಕಡಿಮೆಯಾಗಿದ್ದು, ಇದರಿಂದ ಸದರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿದೆ.

ಮುಂದುವರೆದು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ದೈನಂದಿನ ಕೆಲಸಗಳಿಗೆ, ವಿವಿಧ ಕಟ್ಟಡಗಳಲ್ಲಿ ಕೈಗೊಳ್ಳುವ ದುರಸ್ಥಿಗಾಗಿ, ಕುಲಸಚಿವರು ಸೂಚಿಸಿದ ಕೆಲಸಗಳಿಗೆ ಮತ್ತು ವಿಸ್ತೀರಣಾ ಚಟುವಟಿಕೆಗಳ ಸಣ್ಣ ಪುಟ್ಟ ಅಗತ್ಯತೆಗಳಿಗೆ ಪ್ರತಿ ಮಾಹೆಯಲ್ಲಿ ರೂ.8000/–(ಎಂಟು ಸಾವಿರ ರೂ.ಗಳು ಮಾತ್ರ) ರಿಂದ 10,000/–(ಹತ್ತು ಸಾವಿರ ರೂ.ಗಳು ಮಾತ್ರ) ರೂಪಾಯಿವರೆಗೂ ಖರ್ಚಾಗುತ್ತಿದ್ದು, ಪ್ರತ್ಯೇಕವಾಗಿ ರೂ. 10,000/–(ಹತ್ತು ಸಾವಿರ ರೂ.ಗಳು ಮಾತ್ರ) ಖಾಯಂ ಮುಂಗಡ ನೀಡಲು ಕೋರಿ ಶ್ರೀ ಉಮೇಶ ಬಾರಕೇರ, ಕುಲಸಚಿವರ ವಿಶೇಷಾಧಿಕಾರಿಗಳು, ಇವರು ದಿನಾಂಕ 20–08–2020 ರಂದು ಬೇಡಿಕೆ ಪತ್ರವನ್ನು ಸಲ್ಲಿಸಿರುತ್ತಾರೆ.

Dessi Project ಸಂಯೋಜಕರಾಗಿ ಶ್ರೀ ರಂಗಪ್ಪ ಯರಡ್ಡಿ, ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು ಇವರನ್ನು ನೇಮಿಸಿರುತ್ತದೆ. ಸದರಿಯವರು ಆಳು ಕಡಿಂರಿಜಛಿಣ ಕಾರ್ಯಗಳಾದ ಬಿತ್ತುವುದು, ಕಸ ತೆಗೆಯುವುದು, ಗಿಡಗಳನ್ನು ನೆಡುವುದು, ಬೀಜ & ಗೊಬ್ಬರ ಹಾಕುವುದು, ಕೃಷಿ ಯಂತ್ರೋಪಕರಣಗಳ ಬಾಡಿಗೆಗಾಗಿ ಹಾಗೂ ಇನ್ನಿತರೆ ಕೆಲಸಗಳು ನಡೆಯುತ್ತಿದ್ದು, ಕೆಲಸಕ್ಕೆ ಸಣ್ಣ ಪುಟ್ಟ ಅಗತ್ಯತೆಗಳಿಗೆ ಪ್ರತಿ ಮಾಹೆಯಲ್ಲಿ ರೂ.8000/–(ಎಂಟು ಸಾವಿರ ರೂ.ಗಳು ಮಾತ್ರ) ರಿಂದ 10,000/–(ಹತ್ತು ಸಾವಿರ ರೂ.ಗಳು ಮಾತ್ರ) ರೂಪಾಯಿವರೆಗೂ ಖರ್ಚಾಗುತ್ತಿದ್ದು, ಪ್ರತ್ಯೇಕವಾಗಿ ರೂ. 10,000/–(ಹತ್ತು ಸಾವಿರ ರೂ.ಗಳು ಮಾತ್ರ) ಖಾಯಂ ಮುಂಗಡ ನೀಡಲು ದಿನಾಂಕ 20–08–2020 ರಂದು ಬೇಡಿಕೆ ಪತ್ರವನ್ನು ಸಲ್ಲಿಸಿರುತ್ತಾರೆ.

ಸಸ್ಯ ಶಿಶುಪಾಲನಾ ಕೇಂದ್ರ ನಿರ್ಮಾಣ ಕಾರ್ಯಗಳನ್ನು ಈಗಾಗಲೇ ಕೈಗೊಳ್ಳಲಾಗಿದ್ದು, ಸದರಿ ಸಸ್ಯ ಶಿಶುಪಾಲನಾ ಕೇಂದ್ರಕ್ಕೆ ಸಂಯೋಜಕರಾಗಿ ಡಾ. ನೀಲಮ್ಮ ಕೊಳಗೇರಿ, ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು ಇವರನ್ನು ನೇಮಿಸಿರುತ್ತದೆ. ಸದರಿಯವರು ಸಸ್ಯ ಶಿಶುಪಾಲನಾ ಕೇಂದ್ರ ನಿರ್ಮಾಣ ಕಾರ್ಯಗಳಾದ ಬಿತ್ತವುದು, ಕಸ ತೆಗೆಯುವುದು, ಗಿಡಗಳನ್ನು ನೆಡುವುದು, ಬೀಜ & ಗೊಬ್ಬರ ಹಾಕುವುದು, ಪಾಲಿಬ್ಯಾಗ್ಸ ತುಂಬವುದು ಹಾಗೂ ಇನ್ನಿತರೆ ಕೆಲಸದ ಸಣ್ಣ ಪುಟ್ಟ ಅಗತ್ಯತೆಗಳಿಗೆ ಪ್ರತಿ ಮಾಹೆಯಲ್ಲಿ ರೂ.8000/-(ಎಂಟು ಸಾವಿರ ರೂ.ಗಳು ಮಾತ್ರ) ರಿಂದ 10,000/-(ಹತ್ತು ಸಾವಿರ ರೂ.ಗಳು ಮಾತ್ರ) ರೂಪಾಯಿವರೆಗೂ ಖರ್ಚಾಗುತ್ತಿದ್ದು, ಪ್ರತ್ಯೇಕವಾಗಿ ರೂ. 10,000/-(ಹತ್ತು ಸಾವಿರ ರೂ.ಗಳು ಮಾತ್ರ) ಖಾಯಂ ಮುಂಗಡ ನೀಡಲು ದಿನಾಂಕ 20-08-2020 ರಂದು ಬೇಡಿಕೆ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿ ಚಟುವಟಿಕೆಗಳಿಗೆ ಸಾಕಷ್ಟು ಸಣ್ಣ ಪುಟ್ಟ ಖರ್ಚುಗಳು ವೆಚ್ಚವಾಗುತ್ತಿದ್ದು, ಎಸ್ಟೇಟ್ ಅಧಿಕಾರಿಗಳಿಗೆ ನೀಡಿರುವ ಮುಂಗಡ ಹಣದಲ್ಲಿ ಸದರಿ ವೆಚ್ಚಗಳನ್ನು ಭರಿಸಲು ಕಡಿಮೆಯಾಗುತ್ತಿದೆ. ಸದರಿ ಚಟುವಟಿಕೆಗಳು ಹವಾಮಾನ ಮತ್ತು ಮಳೆಯಾಧಾರಿತವಾಗಿರುವದರಿಂದ ಕಾಲಕಾಲಕ್ಕೆ ನಿಗದಿತವಾಗಿ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ, ಈ ಕಾರಣಕ್ಕಾಗಿ ಸದರಿ ಕೃಷಿ ಪ್ರಾಯೋಗಿಕ ಚಟುವಟಿಕೆಗಳಿಗಾಗಿ ಹಾಗೂ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ ನಿರ್ಮಾಣ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದಿಂದ ನಿಯೋಜಿಸಿರುವ ಶ್ರೀ ಉಮೇಶ ಬಾರಕೇರ, ಕುಲಸಚಿವರ ವಿಶೇಷಾಧಿಕಾರಿಗಳು, ಶ್ರೀ ರಂಗಪ್ಪ ಯರಡ್ಡಿ, ಅತಿಥಿ ಉಪನ್ಯಾಸಕರು ಹಾಗೂ ಡಾ. ನೀಲಮ್ಮ ಕೊಳಗೇರಿ, ಅತಿಥಿ ಉಪನ್ಯಾಸಕರು ಇವರಿಗೆ ಸದರಿ ಕಾರ್ಯ ಚಟುವಟಿಕೆಗಳು ಮುಗಿಯುವವರೆಗೆ ತಾತ್ಕಾಲಿಕವಾಗಿ ತಲಾ ರೂ. 10,000/-(ಹತ್ತು ಸಾವಿರ ರೂ.ಗಳು ಮಾತ್ರ) ಖಾಯಂ ಮುಂಗಡ ನೀಡಬೇಕಾಗಿರುವದರಿಂದ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ಸದರಿ ವಿಷಯದ ಕುರಿತು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. ವಿಶ್ವವಿದ್ಯಾಲಯದ ವಿವಿಧ ಕಾರ್ಯಚಟುವಟಿಕೆಗಳಿಗೆ ತಾತ್ಕಾಲಿಕವಾಗಿ ಮುಂಗಡ ಹಣ ಹೊಂದುವುದು ಅತ್ಯಗತ್ಯವಾಗಿರುವುದರಿಂದ ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ಟೇಬಲ್ ಅಜೆಂಡಾ ಸಂಖ್ಯೆ 2: ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದ ಜಮೀನಿನ ಸುರಕ್ಷತೆಗಾಗಿ ತಂತಿ ಬೇಲಿ/ರಕ್ಷಣಾ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸುವ ಕುರಿತು.**

**ಪರಾಮರ್ಶನ ಟಿಪ್ಪಣಿ**

ವಿಶ್ವವಿದ್ಯಾಲಯಕ್ಕೆ ನೂತನ ಕ್ಯಾಂಪಸ್ ನಿರ್ಮಾಣಕ್ಕಾಗಿ ಒಟ್ಟು 373 ಎಕರೆ ಮಂಜೂರಾಗಿದ್ದು, ಇದರಲ್ಲಿ 278 ಎಕರೆ ಜಮೀನು ಬಳಕೆಗೆ ಲಭ್ಯವಿರುತ್ತದೆ. ಸದರಿ ಬಳಕೆಗೆ ಲಭ್ಯವಿರುವ ಜಮೀನಿನಲ್ಲಿ ಕೃಷಿ ಚಟುವಟಿಕೆಗಳಿಗೆ ನಿಗದಿಪಡಿಸಲಾದ 6 ಎಕರೆ ಜಮೀನು ಹಾಗೂ ಮಾದರಿ ಸಸ್ಯ ಶಿಶುಪಾಲನಾಲಯ ಕೇಂದ್ರದ ನಿರ್ಮಾಣಕ್ಕೆ ನಿಗದಿಪಡಿಸಲಾದ 1.5 ಎಕರೆ ಜಮೀನು ನಾಗಾವಿ ಗ್ರಾಮಕ್ಕೆ ಹೊಂದಿಕೊಂಡಿರುತ್ತದೆ. ಈ ಕಾರಣಕ್ಕಾಗಿ ಅಲ್ಲಿ ಮಾದರಿ ಸಸ್ಯ ಶಿಶುಪಾಲನಾಲಯ ಹಾಗೂ ಕೃಷಿ ಚಟುವಟಿಕಗಳನ್ನು ಕೈಗೊಂಡ ನಂತರ ಅಲ್ಲಿ ದನ, ಕರು, ಮೇಕೆ, ಎಮ್ಮೆ ಇತ್ಯಾದಿ ಪ್ರಾಣಿಗಳ ಉಪಟಳ ಪ್ರಾರಂಭವಾಗಬಹುದು ಮತ್ತು ಸದರಿ ಜಮೀನು ನಾಗಾವಿ ಗ್ರಾಮದ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಸಾರ್ವಜನಿಕರಿಂದ ಸದರಿ ಜಮೀನು ಒತ್ತುವರಿಯಾಗುವ ಸಂಭವವಿರುತ್ತದೆ.

ಮುಂದುವರೆದು ಸದರಿ ಕೃಷಿ ಜಮೀನಿನಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಜಾರಿಗೊಳಿಸಬೇಕಾಗಿರುವದರಿಂದ ಜಮೀನಿನ ಸುರಕ್ಷತೆಯು ಅವಶ್ಯಕವಾಗಿರುತ್ತದೆ. ಸದರಿ ಜಮೀನಿನ ಸಂರಕ್ಷಣೆಗಾಗಿ ಅಗತ್ಯಕ್ಕೆ ತಕ್ಕಂತೆ ತಂತಿಬೇಲಿ/ರಕ್ಷಣಾ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸಬೇಕಾಗಿರುತ್ತದೆ. ಸದರಿ ತಂತಿಬೇಲಿ/ರಕ್ಷಣಾ ಗೋಡೆಗಳ ನಿರ್ಮಾಣಕ್ಕಾಗಿ ತಗಲುವ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಅಥವಾ ವಿಶ್ವವಿದ್ಯಾಲಯದ ಸ್ವಂತ ಆದಾಯದಲ್ಲಿ ಭರಿಸಲಾಗುವುದು.

ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಜಮೀನಿನ ಸಂರಕ್ಷಣೆಗಾಗಿ ಅಗತ್ಯಕ್ಕೆ ತಕ್ಕಂತೆ ತಂತಿಬೇಲಿ/ರಕ್ಷಣಾ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಜಮೀನಿನ ಮತ್ತು ಕೃಷಿ ಜಮೀನಿನಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಜಾರಿಗೊಳಿಸಬೇಕಾಗಿರುವದರಿಂದ ಜಮೀನಿನ ಸುರಕ್ಷತೆಯು ಅವಶ್ಯಕವಾಗಿರುತ್ತದೆ. ಸದರಿ ಜಮೀನಿನ ಸಂರಕ್ಷಣೆಗಾಗಿ ಅಗತ್ಯಕ್ಕೆ ತಕ್ಕಂತೆ ತಂತಿಬೇಲಿ/ರಕ್ಷಣಾ ಗೋಡೆಗಳನ್ನು ಹಂತ ಹಂತವಾಗಿ ನಿರ್ಮಿಸುವ ವಿಷಯವನ್ನು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಸದಸ್ಯರುಗಳಾದ ಬಿ.ಜಿ. ಗೋವಿಂದಪ್ಪಾ ಮತ್ತು ರಾಜೇಂದ್ರ ಪ್ರಸಾದ ರವರು ಈ ವಿಷಯಕ್ಕೆ ಕುರಿತು ಪ್ರಸ್ತಾವನೆ ಮಾಡಿರುತ್ತಾರೆಂದು ಸಭೆಗೆ ವಿವರಿಸಿದರು. ಸಭೆಯ ಪ್ರಾರಂಭದಲ್ಲಿ ಶ್ರೀ ಅಬ್ದುಲ್ ಹಕೀಂ ಇವರೂ ಸಹ ಸದರಿ ವಿಷಯದ ಕುರಿತು, ಸಭೆಯ ಗಮನ ಸೆಳೆದಿದ್ದರು. ಈ ವಿಷಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**ಟೆಬಲ್ ಅಜೆಂಡಾ ಸಂಖ್ಯೆ 3:** ದಿನಾಂಕ 26-08-2020 ರಂದು Online virtual meeting mode ನಲ್ಲಿ ಜರುಗಿದ 9 ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸಿವ ಬಗ್ಗೆ.

**ಪರಾಮರ್ಶನ ಟಿಪ್ಪಣಿ**

ದಿನಾಂಕ 26-08-2020 ರಂದು Online virtual meeting mode ನಲ್ಲಿ ಜರುಗಿದ 9 ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನುಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡಾವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ. (ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.)

**ನಿರ್ಣಯ**

ದಿನಾಂಕ 26/08/2020 ರಂದು ಜರುಗಿದ 9 ನೇ ಕಾಮಗಾರಿ ಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. 9ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಕೋರಿದರು. ಮಾನ್ಯ ಸದಸ್ಯರಾದ ಬಿ.ಜಿ. ಗೋವಿಂದಪ್ಪ ಇವರು ಅಲ್ಪ ಮೊತ್ತದ ತುಂಡು ಕಾಮಗಾರಿಗಳನ್ನು ವಿಶ್ವವಿದ್ಯಾಲಯದ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ನೀಡಬೇಕು ನಿರ್ಮಿತಿ ಕೇಂದ್ರಗಳು ಮತ್ತು KRIDL ತುಂಡು ಗುತ್ತಿಗೆ ಹೆಚ್ಚಿನ ಕಮಿಷನ ಪಡೆಯುತ್ತವೆ ಆದುದರಿಂದ ಆ ಸಂಸ್ಥೆಗಳಿಗೆ ನೀಡಬಾರದೆಂದು ಸೂಚಿಸಿದರು. ಮುಂದುವರೆದು, ಹಣಕಾಸು ಅಧಿಕಾರಿಗಳು, ಸರ್ಕಾರದ ನಿಯಮಾನುಸಾರ ನಿರ್ಮಿತಿ ಕೇಂದ್ರಗಳು ಕಮಿಷನ್ ಇಲ್ಲದೆ ತುಂಡು ಗುತ್ತಿಗೆ ಕಾಮಗಾರಿ ಅನುಷ್ಠಾನಗೊಳಿಸುವುದಾಗಿ ವಿವರಿಸಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ವಿಶ್ವವಿದ್ಯಾಲಯದ ಕಾಮಗಾರಿ ವಿಕ್ಷಣೆಗೆ ಆಗಮಿಸಿದಾಗ, ವಿಶ್ವವಿದ್ಯಾಲಯು ಹೂಸ ಕಟ್ಟಡಗಳ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರಾದ ಶ್ರೀ ಶಿವಶಂಕರ ರವರು ತಿಳಿಸಿದಂತೆ ಈಗ ನಿಗದಿಪಡಿಸಿದ ಕಾಮಗಾರಿಗಳ ಮೊತ್ತವನ್ನು ಪೂರ್ಣ ವಿನಯೋಗಿಸಿ ಮತ್ತು ಹೂಸ ಕಟ್ಟಡ ಕಾಮಗಾರಿಗಳ ನಿರ್ಮಾಣದ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೋರಿರುತ್ತಾರೆ ಎಂದು ವಿವರಿಸಿದರು. ಮಾನ್ಯ ಸದಸ್ಯರಾದ ಅರುಣ ಪಾಟೀಲರವರು ಮಾತನಾಡುತ್ತಾ ಹೂಸ ಕಟ್ಟಡಗಳ ಕಾಮಗಾರಿಗಳು ಮೂಲ ನಕ್ಷೆಯಂತೆ ನಡೆಯಬೇಕು ಎಂದು ಸಭೆಗೆ ಸೂಚಿಸಿದರು.

ಮೇಲಿನ ಚರ್ಚೆಗಳೊಂದಿಗೆ, ದಿನಾಂಕ: 26-08-2020 ರಂದು Online virtual meeting mode ನಲ್ಲಿ ಜರುಗಿದ 9 ನೇ ಕಾಮಗಾರಿ ಸಮಿತಿ ಸಭೆಯ ಎಲ್ಲಾ ನಡಾವಳಿಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

**ಕುಲಸಚಿವರು** **ಕುಲಪತಿಗಳು**